**ಸಂಪುಟ:** 05 **ಸಂಚಿಕೆ:** 249 **ಪುಟಗಳು:** 08 ಭಾನುವಾರ 23 ನವೆಂಬರ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನಿಸ್ವಾರ್ಥ ಮತ್ತು ಸಮರ್ಥ ಕೆಲಸವನ್ನು ಮಾಡುವವರೆಲ್ಲರೂ ನಿಜವಾದ ಅನ್ವೇಷಕರಾಗಿ ರುತ್ತಾರೆ. ನೀವು ಮಾಡುವ ಸೇವೆ ಯಾವಾಗಲೂ ನಿಸ್ವಾರ್ಥತೆಯನ್ನು ಹೊಂದಿರಲಿ.

# ಮಸೀದಿ ಬಳಿ ಕಾಮಗಾರಿಗೆ ನೆಲ ತೋಡುವಾಗ ಸೀತಾರಾಮ ವಿಗ್ರಹ ಪತ್ತೆ

• **ಉದಯವಾಹಿನಿ, ಭೋಪಾಲ್**

ಮಧ್ಯಪ್ರದೇಶದ ಸಾಗರ ಎಂಬ ಊರಿನಲ್ಲಿರುವ ಜಾಮಾ ಮಸೀದಿ ಬಳಿಯಲ್ಲಿರುವ ಭೂಮಿಯಲ್ಲಿ ಅಭಿವೃದ್ಧಿ ಕಾಮಗಾರಿಗೆ ಭೂಮಿಯನ್ನು ತೋಡುತ್ತಿದ್ದಾಗ ಸೀತಾರಾಮನ ವಿಗ್ರಹ ಸಿಕ್ಕಿದೆ. ಇದು ಗೊತ್ತಾಗುತ್ತಿದ್ದಂತೆ. ಅಕ್ಕಪಕ್ಕದ ಊರಿನವರು ಬಂದು ಕಾಮಗಾರಿ ನಡೆಯುತ್ತಿದ್ದ ಸ್ಥಳದಲ್ಲಿ ಜಮಾಯಿಸಿದ್ದಾರೆ. ಕೂಡಲೇ ಎಚ್ಚೆತ್ತ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ಹತೋಟಿಗೆ ತೆಗೆದುಕೊಂಡಿದ್ದಾರೆ.

ಹಳ್ಳಿಗರ ಪ್ರಕಾರ, ಕಾಮಗಾರಿ ನಡೆಯುತ್ತಿದ್ದ ಜಾಗದಲ್ಲಿ ಹಿಂದೆ ದೇವಾಲಯವಿತ್ತು, ಆ ಜಾಗವನ್ನು ಬಹಳ ಹಿಂದೆಯೇ ರಾಜರ ಆಳ್ವಿಕೆಯ ಕಾಲದಲ್ಲಿ ವಶಪಡಿಸಿಕೊಳ್ಳಲಾಗಿತ್ತು ಎಂದು ಹೇಳಿದ್ದಾರೆ. ಇದರಿಂದಾಗಿ ಹಿಂದೂ ಮತ್ತು ಮುಸ್ಲಿಂ ಸಮುದಾಯದ ಅನೇಕರು ಸ್ಥಳಕ್ಕೆ ಆಗಮಿಸಿ ದೊಡ್ಡ ಜನಸಂದಣಿ ಉಂಟಾಯಿತು.

ಹಿಂದೂಗಳು ಹಾಗೂ ಮುಸ್ಲಿಂ ಮುಖಂಡರು ತಮ್ಮ ತಮ್ಮ ವಾದವನ್ನು ಮಂಡಿಸಿದ್ದಾರೆ. ಆದರೆ, ಇತಿಹಾಸತಜ್ಞರು ಅದನ್ನು ಖಚಿತಪಡಿಸಬೇಕಿದೆ. ಆದರೂ, ಯಾವುದೇ ಸಂದರ್ಭದಲ್ಲಿ ಇಲ್ಲಿನ ಪರಿಸ್ಥಿತಿ ಕೈ ಮೀರಿ ಹೋಗುವ ಸೂಕ್ಷ್ಮತೆಯನ್ನು ಅರಿತಿರುವ ಪೊಲೀಸರು ಕೂಡಲೇ ಭೂಮಿಯಲ್ಲಿ ಸಿಕ್ಕಿರುವ ವಿಗ್ರಹಕ್ಕೆ ಬಟ್ಟೆ ಕಟ್ಟಿ ಅದನ್ನು ವಶಕ್ಕೆ ಪಡೆದೊಯ್ದಿದ್ದಾರೆ.

ಸಂಸ್ಕೃತ ಬಚಾವೊ ಮಂಚ್‌ನ ನಾಯಕರು ಆಗಮಿಸಿ, ಈ ಜಾಗದಲ್ಲಿ ಹಿಂದೂ ದೇವಾಲಯವಿದ್ದು, ಈಗ ಮತ್ತೆ ಆ ಸ್ಥಳದಲ್ಲಿ ರಾಮ-ಸೀತೆಯ ದೇವಸ್ಥಾನ ನಿರ್ಮಾಣವಾಗಬೇಕು ಎಂದು ಅವರು ಆಗ್ರಹಿಸಿದ್ದಾರೆ. ಪೊಲೀಸರು ವಿಗ್ರಹವನ್ನು ಸೀಜ್ ಮಾಡುವುದಕ್ಕೂ ಮುನ್ನ ಆ ವಿಗ್ರಹವನ್ನು ತೊಳೆದು ಪೂಜೆ ಮಾಡಲಾಗಿದೆ. ಆದರೆ, ಆ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದವರು ವಿಗ್ರಹಕ್ಕೆ ಪೂಜೆ ಮಾಡುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು.

**ಮಧ್ಯಪ್ರದೇಶದಲ್ಲಿ ಪರಿಸ್ಥಿತಿ ಉದ್ವಿಗ್ನ**



**ಉತ್ತರ ಪ್ರದೇಶದ ಸಂಭಾಲ್ ಮಸೀದಿಯ ಸಮೀಕ್ಷೆಯ ನಂತರ ವಿಗ್ರಹಗಳು ಕಂಡುಬಂದಿತ್ತೇ:** ಉತ್ತರ ಪ್ರದೇಶದಲ್ಲಿ ವಿಗ್ರಹಗಳು ಪತ್ತೆಯಾಗಿವೆ ಎಂಬ ಮಾಹಿತಿ ತಪ್ಪು ಎಂದು ಸ್ಪಷ್ಟವಾಗಿದೆ. ಫೆಬ್ರವರಿ 2024ರಲ್ಲಿ ದಕ್ಷಿಣ ಭಾರತದ ಕರ್ನಾಟಕದಲ್ಲಿ ಮಸೀದಿ ಸಮೀಕ್ಷೆಯ ಸಂದರ್ಭದಲ್ಲಿ ಈ ಮೂರು ವಿಗ್ರಹಗಳು ಕಂಡುಬಂದಿವೆ.

ಆದಾಗ್ಯೂ, ಫೇಸ್‌ಬುಕ್ ಬಳಕೆದಾರರು ಈ ಕೊಲಾಜ್ ಅನ್ನು ತೆಲುಗಿನ ಶೀರ್ಷಿಕೆಯೊಂದಿಗೆ, ಉತ್ತರ ಭಾರತದ ರಾಜ್ಯವಾದ ಉತ್ತರ ಪ್ರದೇಶದ ಸಂಭಾಲ್ ಜಿಲ್ಲೆಯಲ್ಲಿ ನಡೆದ ವಿದ್ಯಮಾನ ಎಂದು ತಪ್ಪಾಗಿ ಹಂಚಿಕೊಂಡಿರುವುದು ತಿಳಿದುಬಂದಿದೆ.

**ಮಸೀದಿಯಲ್ಲಿ 'ಜೈ ಶ್ರೀರಾಮ್' ಕೂಗುವುದು ತಪ್ಪಲ್ಲ:** ಕರ್ನಾಟಕ ಹೈಕೋರ್ಟ್ ಪ್ರಮುಖ ತೀರ್ಪು ನೀಡಿದ್ದು, 'ಜೈ ಶ್ರೀರಾಮ್' ಎಂದು ಘೋಷಣೆ ಕೂಗುವುದು ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುವುದಿಲ್ಲ ಎಂದು ಅಭಿಪ್ರಾಯಪಟ್ಟಿದೆ.

ಈ ಹಿನ್ನೆಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಕಡಬದಲ್ಲಿರುವ ಮಸೀದಿಯ ಆವರಣಕ್ಕೆ ನುಗ್ಗಿ 'ಜೈ ಶ್ರೀರಾಮ್' ಘೋಷಣೆ ಕೂಗಿದ್ದ ಇಬ್ಬರು ಆರೋಪಿಗಳ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

**ಕುತುಬ್ ಮಿನಾರ್ ಕೂಡ ನಮ್ಮದೇ**

ಶ್ರೀರಾಮ ಸೇನೆ ಮುಖಂಡ ಪ್ರಮೋದ್ ಮುತಾಲಿಕ್ ಅವರು, ದೇಶದಲ್ಲಿ ಲಕ್ಷಾಂತರ ದೇವಾಲಯಗಳನ್ನು ಒಡೆದು ಮಸೀದಿಗಳನ್ನು ಕಟ್ಟಿರುವ ಇತಿಹಾಸ ಇದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಬಾದಾಮಿಯಲ್ಲಿ ಶೋಭಾ ಯಾತ್ರೆಗೆ ಆಗಮಿಸಿದ್ದ ಸಂದರ್ಭದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೊಘಲರು ಮತ್ತು ಸುಲ್ತಾನರ ಕಾಲದಲ್ಲಿ ನಡೆದ ದಾಳಿಗಳ ಬಗ್ಗೆ ಪ್ರಸ್ತಾಪಿಸಿದರು. ಬಾದಾಮಿ ಮಸೀದಿ ಕೆಳಗೆ ದೇವಸ್ಥಾನ ಇದೆ, ಕುತುಬ್ ಮಿನಾರ್ ಇರುವ ಜಾಗ ಕೂಡ ನಮ್ಮದೇ ಎಂದಿದ್ದಾರೆ.

## ಗಾಳ ಹಾಕಿ ಮೀನು ಹಿಡಿಯುವ ಕಲೆ ಗೊತ್ತು

• **ಉದಯವಾಹಿನಿ, ಬೆಂಗಳೂರು**

'ಗಾಳ ಹಾಕಿ ಮೀನು ಹಿಡಿಯುವ ಕಲೆ ನನಗೆ ಗೊತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ವಿಶ್ವ ಮೀನುಗಾರಿಕೆ ದಿನಾಚರಣೆಯ ಅಂಗವಾಗಿ ಮೀನುಗಾರಿಕೆ ಇಲಾಖೆ ಆಯೋಜಿಸಿರುವ ಮತ್ಸ್ಯ ಮೇಳದಲ್ಲಿ ಅವರು ಮಾತನಾಡಿದರು. ಪ್ರಸಕ್ತ ರಾಜಕೀಯ ಬೆಳವಣಿಗೆಗಳ ನಡುವೆ ಶಿವಕುಮಾರ್ ಅವರು ಈ ರೀತಿ ಮಾತನಾಡಿರುವುದು ರಾಜಕೀಯ ವಲಯದಲ್ಲಿ ನಾನಾ ರೀತಿಯ ಚರ್ಚೆಗೆ ಗ್ರಾಸವಾಗಿದೆ. 'ನಾನು ಮುಖ್ಯಮಂತ್ರಿಗಳಿಗೆ ಮಶೀರ್ ಫಿಶ್ ತೋರಿಸಿದೆ. ನಾನು ಬಾಲ್ಯದಲ್ಲಿ ಸಂಗಮಕ್ಕೆ ಹೋಗಿ ಮೀನುಗಳನ್ನು ಹಿಡಿಯುತ್ತಿದ್ದೆ. ಅದಕ್ಕೆ ಬಹಳ ತಾಳ್ಮೆ ಬೇಕು. ಈ ಮೀನು ವ್ಯವಹಾರ ಜಾತಿಯ ಮೇಲೆ ಇಲ್ಲ. ನೀತಿ, ಛಲ ಹಾಗೂ ಆಸಕ್ತಿಯ ಮೇಲಿದೆ' ಎಂದು ತಿಳಿಸಿದರು. ''ಮೀನು ಎಂದರೆ ಲಕ್ಷ್ಮಿ. ರೈತರು ಭೂಮಿಯಲ್ಲಿ ಕೃಷಿ ಮಾಡಿದರೆ, ಮೀನುಗಾರರು ನೀರಿನಲ್ಲಿ ಕೃಷಿ ಮಾಡುತ್ತಾರೆ. ನಿಮ್ಮ ಪ್ರಾಣವನ್ನು ಪಣಕ್ಕಿಟ್ಟು ಸಮುದ್ರದಲ್ಲಿ ಮೀನುಗಾರಿಕೆ ಮಾಡುತ್ತೀರಿ. ನಿಮಗೆ ಸೂರ್ಯ, ಚಂದ್ರ ಎರಡೇ ಕಾಣುವುದು. ಉಳಿದಂತೆ ನಿಮ್ಮ ಆತ್ಮಬಲದಿಂದ ಇದನ್ನು ಮಾಡಿಕೊಂಡು ಬರುತ್ತಿದ್ದೀರಿ. ಮೀನು ಹಿಡಿಯುವುದು ಬೇರೆ, ಮಾರಾಟ ಮಾಡುವುದು ಬೇರೆ. ಮೀನುಗಾರನಿಗೆ ನಿತ್ಯ ಮೀನು ಸಿಗುವುದಿಲ್ಲ. ಕೆಲವೊಮ್ಮೆ ವಾರವಾದರೂ ಒಂದು ಮೀನು ಸಿಗುವುದಿಲ್ಲ. ಅಂತಹ ತಾಳ್ಮೆ ವೃತ್ತಿ ನಡೆಸುತ್ತಿರುವ ನೀವು ಶ್ರಮಜೀವಿಗಳು' ಎಂದು ಮಾರ್ಮಿಕವಾಗಿ ಹೇಳಿದರು.

## ಬೆಂಗಳೂರು ಜೈನ, ಬೌದ್ಧ, ಸಿಖ್, ಕ್ರಿಶ್ಚಿಯನ್ ಭವನಕ್ಕೂ ಅನುದಾನ

• **ಉದಯವಾಹಿನಿ, ಬೆಂಗಳೂರು**

'ಕಳೆದ ಮೂರು ವರ್ಷಗಳಲ್ಲಿ ಜೈನ, ಬೌದ್ಧ, ಸಿಖ್ ಸಮುದಾಯದ ಸಂಘ ಸಂಸ್ಥೆಗಳಿಗೂ ಸಮುದಾಯ ಭವನ ನಿರ್ಮಾಣಕ್ಕೆ ಇಲಾಖೆಯಿಂದ ಅನುದಾನ ನೀಡಲಾಗಿದೆ' ಎಂದು ಅಲ್ಪಸಂಖ್ಯಾತ ಕಲ್ಯಾಣ ಸಚಿವ ಬಿ. ಝಡ್. ಜಮೀರ್ ಅಹ್ಮದ್ ಖಾನ್ ತಿಳಿಸಿದ್ದಾರೆ. 'ಜೈನ ಸಮುದಾಯಕ್ಕೆ 148 ಭವನಗಳಿಗೆ 26 ಕೋಟಿ, ಬೌದ್ಧ ಸಮುದಾಯಕ್ಕೆ 11 ಭವನಗಳಿಗೆ 3 ಕೋಟಿ, ಸಿಖ್ ಸಮುದಾಯದ ಒಂದು ಭವನಕ್ಕೆ 50 ಲಕ್ಷ, ಕ್ರಿಶ್ಚಿಯನ್ ಸಮುದಾಯದ 188 ಭವನಗಳಿಗೆ 47 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ' ಎಂದು ವಿವರಿಸಿದ್ದಾರೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಬಹುಪಯೋಗಿ ಭವನ ನಿರ್ಮಾಣಕ್ಕೆ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಿಂದ ಮುಸ್ಲಿಂ ಸಮುದಾಯಕ್ಕೆ ಅನುದಾನ ನೀಡಿರುವುದಕ್ಕೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಕ್ಷೇಪ ವ್ಯಕ್ತಪಡಿಸಿದ್ದರು.

## ಶಿಕ್ಷಕರ ಸಂಬಳ ಬಿಡುಗಡೆಗೆ ಆದೇಶ: ದಂಡದ ಎಚ್ಚರಿಕೆ

• **ಉದಯವಾಹಿನಿ, ಬೆಂಗಳೂರು**

'ಯಾರನ್ನೇ ಆಗಲಿ, ವಿಶೇಷವಾಗಿ ಸಾರ್ವಜನಿಕ ಸೇವಾ ವಲಯಗಳಲ್ಲಿ ದುಡಿಯುವವರಿಗೆ ಸೂಕ್ತ ವೇತನ ನೀಡದೆ ಕೆಲಸ ಮಾಡಿ ಎಂದು ಬಲವಂತ ಮಾಡುವಂತಿಲ್ಲ ಎಂಬ ಸ್ಥಾಪಿತ ಕಾನೂನನ್ನು ಪ್ರತಿಯೊಬ್ಬರೂ ಕಡ್ಡಾಯವಾಗಿ ಪಾಲನೆ ಮಾಡಬೇಕು' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ತಾಕೀತು ಮಾಡಿದೆ.

ಪ್ರಕರಣವೊಂದರ ವಿಚಾರಣೆಯನ್ನು ನಡೆಸಿದ ಹೈಕೋರ್ಟ್, ಚಾತಕಪಕ್ಷಿಗಳಂತೆ ಕಾಯುತ್ತಿರುವ ಶಿಕ್ಷಕರ ಸಂಬಳವನ್ನು ಕೂಡಲೇ ಬಿಡುಗಡೆ ಮಾಡುವಂತೆ ರಾಜ್ಯ ಪ್ರಾಥಮಿಕ ಶಿಕ್ಷಣ ಇಲಾಖೆಗೆ ನಿರ್ದೇಶಿಸಿದೆ. 'ಕಳೆದ 19 ತಿಂಗಳಿನಿಂದ ತಡೆ ಹಿಡಿಯಲಾಗಿರುವ ನಮ್ಮ ಸಂಬಳವನ್ನು ಬಿಡುಗಡೆ ಮಾಡಲು ಧಾರವಾಡದ ಪ್ರಾಥಮಿಕ ಶಿಕ್ಷಣ ಇಲಾಖೆಯ ಹೆಚ್ಚುವರಿ ಆಯುಕ್ತರಿಗೆ ನಿರ್ದೇಶಿಸಬೇಕು' ಎಂದು ಕೋರಿ ಅನಿಲ್ ಎಂ.ಕಾನವಾಡೆ ಸೇರಿದಂತೆ ನಾಲ್ವರು ಶಿಕ್ಷಕರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

# ಮೋದಿ ವಿಶ್ವದ ಅಭಿವೃದ್ಧಿಗೆ ನಾಂದಿ

**ವಿಶ್ವ ಅಭಿವೃದ್ಧಿಗೆ 4 ಸೂತ್ರ ಕೊಟ್ಟ ಮೋದಿ**

**ಜಿ20 ಶೃಂಗಸಭೆಯಲ್ಲಿ ಮೋದಿ ಪ್ರಸ್ತಾಪ**

**ಮೋದಿ ಸ್ವಾಗತಕ್ಕೆ ಸಜ್ಜಾಗ್ತಿದೆ ಕೃಷ್ಣನಗರಿ!**



1. ಜಾಗತಿಕ ಅಭಿವೃದ್ಧಿಗಾಗಿ ಮೋದಿ ಪಂಚ ಸೂತ್ರ
2. ಜಿ20 ಶೃಂಗಸಭೆಯಲ್ಲಿನ ತಮ್ಮ ಭಾಷಣದಲ್ಲಿ ಐದು ಸೂತ್ರಗಳ ಉಲ್ಲೇಖ
3. ದಕ್ಷಿಣ ಆಫ್ರಿಕಾದ ಜೊಹಾನ್ಸ್ ಬರ್ಗ್ ನಡೆಯುತ್ತಿರುವ ಜಿ20 ಶೃಂಗಸಭೆ

**ಭಯೋತ್ಪಾದನೆ ನಿಗ್ರಹದಿಂದ ಜಾಗತಿಕ ಆರೋಗ್ಯ ರಕ್ಷಣೆಯವರೆಗೆ**

**ಭಯೋತ್ಪಾದನಾ ಸಂಬಂಧವನ್ನು ಎದುರಿಸುವುದು**

'ಫೆಂಟನಿಲ್‌ನಂತಹ ಅಪಾಯಕಾರಿ ಸಂಶ್ಲೇಷಿತ ಔಷಧಗಳು ವೇಗವಾಗಿ ಹರಡುತ್ತಿವೆ. ಇದು ಸಾರ್ವಜನಿಕ ಆರೋಗ್ಯ ಮತ್ತು ಜಾಗತಿಕ ಭದ್ರತೆಗೆ ದೊಡ್ಡ ಬೆದರಿಕೆಯಾಗಿವೆ' ಎಂದು ಮೋದಿ ಕಳವಳ ವ್ಯಕ್ತಪಡಿಸಿದರು. 'ಮಾದಕವಸ್ತು ಕಳ್ಳಸಾಗಣೆ ಮತ್ತು ಭಯೋತ್ಪಾದನೆಯ ನಡುವಿನ ಸಂಬಂಧವನ್ನು ಮುರಿಯಲು ಜಿ20 ವಿಶೇಷ ಉಪಕ್ರಮವನ್ನು ತೆಗೆದುಕೊಳ್ಳಬೇಕು. ಮಾದಕವಸ್ತು ಕಳ್ಳಸಾಗಣೆ ಜಾಲಗಳನ್ನು ಅಡ್ಡಿಪಡಿಸಲು, ಅಕ್ರಮವಾಗಿ ಹಣದ ಹರಿವನ್ನು ನಿಲ್ಲಿಸಲು ಮತ್ತು ಭಯೋತ್ಪಾದನೆಗೆ ಹಣಕಾಸು ಒದಗಿಸುವುದನ್ನು ತಡೆಯಲು ಎಲ್ಲಾ ದೇಶಗಳು ಒಟ್ಟಾಗಿ ಆರ್ಥಿಕ ಮತ್ತು ಭದ್ರತಾ ಕ್ರಮಗಳನ್ನು ಬಳಸಬೇಕು' ಎಂದು ಮೋದಿ ಹೇಳಿದರು.

**ಜೋಹಾನ್ಸ್ ಬರ್ಗ್:** ಮಾದಕವಸ್ತು ಕಳ್ಳಸಾಗಣೆ ಮತ್ತು ಭಯೋತ್ಪಾದನೆಯ ನಡುವಿನ ಸಂಬಂಧ ಮುರಿಯಲು ಜಿ20 ವಿಶೇಷ ಉಪ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಮೋದಿ ಶನಿವಾರ ಕರೆ ನೀಡಿದರು. 'ಫೆಂಟನಿಲ್ ನಂತಹ ಅಪಾಯಕಾರಿ ಸಂಶ್ಲೇಷಿತ ಔಷಧಗಳ ಹರಡುವಿಕೆ, ಕಳ್ಳಸಾಗಣೆಯನ್ನು ತಡೆಗಟ್ಟಬೇಕಾಗಿದೆ ಮತ್ತು ಭಯೋತ್ಪಾದನೆ ಪ್ರೋತ್ಸಾಹಿಸುವ ಆರ್ಥಿಕ ಅಪರಾಧಕ್ಕೆ ಮಟ್ಟ ಹಾಕಬೇಕಾಗಿದೆ ಎಂದು ಹೇಳಿದರು. ಸಂಶ್ಲೇಷಿತ ಔಷಧಿಗಳು ಜಗತ್ತಿನಾದ್ಯಂತ ವೇಗವಾಗಿ ಹರಡುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದ ಪ್ರಧಾನಿ, ಫೆಂಟನಿಲ್‌ನಂತಹ ವಸ್ತುಗಳು ಸಾರ್ವಜನಿಕ ಆರೋಗ್ಯ, ಸಾಮಾಜಿಕ ಸ್ಥಿರತೆ ಮತ್ತು ಪ್ರಪಂಚದಾದ್ಯಂತ ಭದ್ರತಾ ವ್ಯವಸ್ಥೆಗಳಿಗೆ ತೀವ್ರ ಅಪಾಯಗಳನ್ನುಂಟುಮಾಡುತ್ತವೆ ಎಂದು ಎಚ್ಚರಿಸಿದರು. ಮಾದಕವಸ್ತು ಕಳ್ಳಸಾಗಣೆ ಜಾಲಗಳನ್ನು ಅಡ್ಡಿಪಡಿಸಲು, ಅಕ್ರಮವಾಗಿ ಹಣದ ಹರಿವನ್ನು ನಿಲ್ಲಿಸಲು ಮತ್ತು ಭಯೋತ್ಪಾದನೆಗೆ ಹಣಕಾಸು ಒದಗಿಸುವುದನ್ನು ತಡೆಯಲು ಎಲ್ಲಾ ದೇಶಗಳು ಒಟ್ಟಾಗಿ ಆರ್ಥಿಕ ಮತ್ತು ಭದ್ರತಾ ಕ್ರಮಗಳನ್ನು ಬಳಸಬೇಕು' ಎಂದು ಮೋದಿ ಹೇಳಿದರು.

ಜಾಗತಿಕ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾಲ್ಕು ಹೊಸ ಉಪಕ್ರಮಗಳನ್ನು ಪ್ರಧಾನಿ ಮೋದಿ ಪ್ರಸ್ತಾಪಿಸಿದ್ದಾರೆ. ಇದರಲ್ಲಿ ಮಾದಕವಸ್ತು-ಭಯೋತ್ಪಾದನಾ ಸಂಬಂಧವನ್ನು ಎದುರಿಸುವ ಉಪಕ್ರಮವೂ ಸೇರಿದೆ ಎಂದು ವರದಿಯಾಗಿದೆ.ದಕ್ಷಿಣ ಆಫ್ರಿಕಾದ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಜಿ-20 ಶೃಂಗಸಭೆಯಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಜಾಗತಿಕ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಜಾಗತಿಕವಾಗಿ ಜ್ಞಾನ ಸಂಗ್ರಹಣೆ, ಆರೋಗ್ಯ, ನಾವೀನ್ಯತೆ ಮತ್ತು ಭಯೋತ್ಪಾದನೆ, ಡ್ರಗ್ಸ್ ವಿರುದ್ಧ ಹೋರಾಡುವ ನಾಲ್ಕು ಉಪ ಕ್ರಮಗಳನ್ನು ಪ್ರಸ್ತಾಪಿಸಿದರು.

ಭಾರತೀಯ ಮೌಲ್ಯಗಳು ಜಗತ್ತಿನ ಪ್ರಗತಿಗೆ ದಾರಿದೀಪವಾಗಿವೆ. ಈ ನಾಲ್ಕು ಕ್ಷೇತ್ರಗಳಲ್ಲಿ ಭಾರತಕ್ಕೆ ನಮ್ಮ ಸಂಗ್ರಹಿತ ಜ್ಞಾನವನ್ನು ಮುಂದಕ್ಕೆ ಕೊಂಡೊಯ್ಯಲು ನಾವು ಸಹಕಾರ ನೀಡುತ್ತೇವೆ ಎಂದರು. ಮುಂದಿನ ಹತ್ತು ವರ್ಷಗಳಲ್ಲಿ ಆಫ್ರಿಕಾದಲ್ಲಿ ಹತ್ತು ಲಕ್ಷ ಜನರಿಗೆ ನಾವೀನ್ಯತೆ, ಕೌಶಲ್ಯದ ಪ್ರಮಾಣಿತ ತರಬೇತಿ ರೂಪಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದರು. ಉ20 ಜಾಗತಿಕ ಆರೋಗ್ಯ ರಕ್ಷಣಾ ಪ್ರತಿಕ್ರಿಯೆ ತಂಡ ಮತ್ತು ಆಫ್ರಿಕಾ ಕೌಶಲ್ಯ ಗುಣಕ ಉಪಕ್ರಮವನ್ನು ಸ್ಥಾಪಿಸುವ ಪ್ರಸ್ತಾಪ ಕೂಡಾ ಮಾಡಿದ್ದಾರೆ. ಆರೋಗ್ಯ ತುರ್ತುಸ್ಥಿತಿಗಳು ಮತ್ತು ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ ನಾವು ಒಟ್ಟಾಗಿ ಕೆಲಸ ಮಾಡಿದಾಗ ನಾವು ಬಲಶಾಲಿಯಾಗುತ್ತೇವೆ. ಯಾವುದೇ ತುರ್ತು ಪರಿಸ್ಥಿತಿಗಳ ಸಂದರ್ಭದಲ್ಲಿ ತ್ವರಿತ ನಿಯೋಜನೆಗೆ ಜಿ20 ರಾಷ್ಟ್ರಗಳಿಂದ ತರಬೇತಿ ಪಡೆದ ವೈದ್ಯಕೀಯ ತಜ್ಞರ ತಂಡಗಳನ್ನು ರಚಿಸುವುದು ನಮ್ಮ ಪ್ರಯತ್ನವಾಗಿರಬೇಕು ಮೋದಿ ಹೇಳಿದರು.

**ಆಫ್ರಿಕನ್ ಯುವಕರಿಗೆ ಕೌಶಲ್ಯ ತರಬೇತಿ:** ಆಫ್ರಿಕಾ ಅಭಿವೃದ್ಧಿ ಹೊಂದಿದರೆ ಅದು ಇಡೀ ಜಗತ್ತಿಗೆ ಪ್ರಯೋಜನವನ್ನು ನೀಡುತ್ತದೆ ಎಂದು ಪ್ರಧಾನಿ ಮೋದಿ ಒತ್ತಿ ಹೇಳಿದರು. 'ಜಿ20-ಆಫ್ರಿಕಾ ಬಹು ಕೌಶಲ್ಯ ಕಾರ್ಯಕ್ರಮವನ್ನು ಪ್ರಾರಂಭಿಸಬೇಕು. ಎಲ್ಲಾ ಜಿ20 ದೇಶಗಳು ಇದನ್ನು ಬೆಂಬಲಿಸಬೇಕು. ಮುಂದಿನ 10 ವರ್ಷಗಳಲ್ಲಿ, ಆಫ್ರಿಕಾದಲ್ಲಿ 10 ಮಿಲಿಯನ್ ಯುವಕರಿಗೆ ತರಬೇತಿ ನೀಡಲು 1 ಮಿಲಿಯನ್ ಪ್ರಮಾಣೀಕೃತ ತರಬೇತುದಾರರನ್ನು ಉತ್ಪಾದಿಸಬೇಕು. ಇದಕ್ಕಾಗಿ, ತರಬೇತುದಾರರಿಗೆ ತರಬೇತಿ ನೀಡುವ ವಿಧಾನವನ್ನು ಜಾರಿಗೆ ತರಬೇಕು. ಈ ತರಬೇತುದಾರರು ಲಕ್ಷಾಂತರ ಜನರಿಗೆ ಕೌಶಲ್ಯ ನೀಡಲು ಸಹಾಯ ಮಾಡುತ್ತಾರೆ, ವಿವಿಧ ಕ್ಷೇತ್ರಗಳಲ್ಲಿ ಪ್ರತಿಭೆಗಳ ಸ್ಥಿರ ಹರಿವನ್ನು ಸೃಷ್ಟಿಸುತ್ತಾರೆ' ಎಂದು ಪ್ರಧಾನಿ ಮೋದಿ ಕರೆ ನೀಡಿದರು.

G20 SOUTH AFRICA 2025

**G20 ಶೃಂಗದಲ್ಲಿ ಮೋದಿ ಭಾಗಿ**

### ಜಿ-20 ಶೃಂಗಸಭೆ ಬಹಿಷ್ಕರಿಸಿದ ಅಮೆರಿಕ



ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಜಿ-20 ಶೃಂಗಸಭೆಯಲ್ಲಿ ಅಮೆರಿಕದ ಯಾವುದೇ ಅಧಿಕಾರಿಗಳು ಭಾಗವಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಆಫ್ರಿಕಾನರ್‌ಗಳ ಹತ್ಯೆ ಮತ್ತು ಭೂಮಿ ವಶಪಡಿಸಿಕೊಳ್ಳುವಿಕೆಯಂತಹ ಮಾನವ ಹಕ್ಕುಗಳ ಉಲ್ಲಂಘನೆಗಳು ನಿಲ್ಲುವವರೆಗೆ ಅಮೆರಿಕದ ಈ ನಿರ್ಧಾರ ಜಾರಿಯಲ್ಲಿರುತ್ತದೆ ಎಂದು ಅವರು ಘೋಷಿಸಿದ್ದಾರೆ. ಆದರೆ, ದಕ್ಷಿಣ ಆಫ್ರಿಕಾ ಸರ್ಕಾರವು ಟ್ರಂಪ್ ಅವರ ಈ ಎಲ್ಲಾ ಆರೋಪಗಳನ್ನು ತೀವ್ರವಾಗಿ ತಳ್ಳಿಹಾಕಿದೆ.

### ಟ್ರಂಪ್, ಪುಟಿನ್, ಜಿನ್‌ಪಿಂಗ್ ಗೈರು



ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಉ-20 ಶೃಂಗಸಭೆಯಲ್ಲಿ ಅಮೆರಿಕದ ಯಾವುದೇ ಅಧಿಕಾರಿಗಳು ಭಾಗವಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಆಫ್ರಿಕಾನರ್‌ಗಳ ಹತ್ಯೆ ಮತ್ತು ಭೂಮಿ ವಶಪಡಿಸಿಕೊಳ್ಳುವಿಕೆಯಂತಹ ಮಾನವ ಹಕ್ಕುಗಳ ಉಲ್ಲಂಘನೆಗಳು ನಿಲ್ಲುವವರೆಗೆ ಅಮೆರಿಕದ ಈ ನಿರ್ಧಾರ ಜಾರಿಯಲ್ಲಿರುತ್ತದೆ ಎಂದು ಅವರು ಘೋಷಿಸಿದ್ದಾರೆ. ಆದರೆ, ದಕ್ಷಿಣ ಆಫ್ರಿಕಾ ಸರ್ಕಾರವು ಟ್ರಂಪ್ ಅವರ ಈ ಎಲ್ಲಾ ಆರೋಪಗಳನ್ನು ತೀವ್ರವಾಗಿ ತಳ್ಳಿಹಾಕಿದೆ. ಇದರೊಂದಿಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಗೈರಾಗಿದ್ದಾರೆ. ಈ ನಡುವೆ ಪ್ರಧಾನಿ ಮೋದಿ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರೊಂದಿಗೆ ಮಾತುಕತೆ ನಡೆಸಿರುವ ವಿಡಿಯೋ ವೈರಲ್ ಆಗಿದೆ.

### ಬ್ರಿಟನ್ ಪ್ರಧಾನಿಯೊಂದಿಗೆ ಮಾತುಕತೆ



ಸಮಾವೇಶಕ್ಕೂ ಮುನ್ನ ಜೋಹಾನ್ಸ್‌ಬರ್ಗ್‌ನಲ್ಲಿ ಬ್ರಿಟಿಷ್ ಪ್ರಧಾನಿ ಕೀರ್ ಸ್ಟಾರ್ಮರ್, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರನ್ನ ಭೇಟಿಯಾಗಿ ಮಾತುಕತೆ ನಡೆಸಿದರು. ಕೀರ್ ಸ್ಟಾಮರ್ ಅವರೊಂದಿಗಿನ ತಮ್ಮ ಸಭೆ ಅತ್ಯುತ್ತಮವಾಗಿತ್ತು. ನವೀಕರಿಸಬಹುದಾದ ಇಂಧನವು ಈ ವರ್ಷ ಭಾರತ-ಯುಕೆ ಪಾಲುದಾರಿಕೆಯ ಪ್ರಮುಖ ಅಂಶವಾಗಿದೆ. ಇದರೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ಒಟ್ಟಾಗಿ ಕೆಲಸ ಮಾಡುವುದನ್ನ ಮುಂದುವರಿಸುತ್ತವೆ ಎಂದು ಎಕ್ಸ್ ಖಾತೆಯಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾರೆ.

# ಕರ್ನಾಟಕ ರಾಜಕಾರಣದಲ್ಲಿ ಯಾರೂ ನಿರೀಕ್ಷಿಸದಂತಹ ಕ್ರಾಂತಿ ಆಗುತ್ತೆ?

## ಜೆಡಿಎಸ್ ಬೆಳ್ಳಿ ಹಬ್ಬ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಿಂದ ರಾಜ್ಯ ಸರ್ಕಾರದ ಬಗ್ಗೆ ತೀವ್ರ ಟೀಕಾಪ್ರಹಾರ

• **ಉದಯವಾಹಿನಿ, ಬೆಂಗಳೂರು**

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ರಾಜ್ಯ ರಾಜಕಾರಣದಲ್ಲಿ ಸ್ಫೋಟಕ ಬೆಳವಣಿಗೆಗಳು ನಡೆಯುವ ಸುಳಿವು ನೀಡಿದ್ದಾರೆ. ಬೆಂಗಳೂರಿನಲ್ಲಿ ಜೆಡಿಎಸ್ ಪಕ್ಷದ ಬೆಳ್ಳಿಹಬ್ಬದ ಸಮಾರಂಭದಲ್ಲಿ ಪಾಲ್ಗೊಂಡು ಕಾರ್ಯಕರ್ತರು, ಮುಖಂಡರನ್ನು ಉದ್ದೇಶಿಸಿ ಮಾತನಾಡಿದ ಕೇಂದ್ರ ಸಚಿವರು; ರಾಜ್ಯದಲ್ಲಿ ಇವತ್ತು ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳನ್ನು ನೋಡಿದರೆ ಮುಂದಿನ ದಿನಗಳಲ್ಲಿ ಯಾರೂ ಕೂಡ ನಿರೀಕ್ಷೆ ಮಾಡದಂತಹ ಬೆಳವಣಿಗೆಗಳು ನಡೆಯಲಿವೆ ಎಂದು ಭವಿಷ್ಯ ನುಡಿದರು. ರಾಜಕೀಯದಲ್ಲಿ ಯಾರು ಯಾವ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ ಹೇಳಲಿಕ್ಕೆ ಆಗದಂತಹ ಪರಿಸ್ಥಿತಿ ರಾಜ್ಯದಲ್ಲಿ ಸೃಷ್ಟಿ ಆಗಿದೆ. ರಾಜ್ಯ ರಾಜಕಾರಣದಲ್ಲಿ ಅನಿರೀಕ್ಷಿತ ಮತ್ತು ಸ್ಫೋಟಕ ಬೆಳವಣಿಗೆಗಳು ನಡೆಯಲಿವೆ ಎಂದು ಕುಮಾರಸ್ವಾಮಿ ಅವರು ಹೇಳಿದರು.

**ಕಾಂಗ್ರೆಸ್ ಕೆಟ್ಟ ಆಡಳಿತ:** ಪರೋಕ್ಷವಾಗಿ ಆಡಳಿತ ಪಕ್ಷ ಕಾಂಗ್ರೆಸ್‌ನಲ್ಲಿ ಆಗುತ್ತಿರುವ ಬೆಳವಣಿಗೆಗಳ ಬಗ್ಗೆ ಬೊಟ್ಟು ಮಾಡಿದ ಅವರು ದಿನಕ್ಕೊಂದು, ಕ್ಷಣಕ್ಕೊಂದು ರಾಜಕೀಯ ಬೆಳವಣಿಗೆ ನಡೆಯುತ್ತಿರುವುದು ನೋಡಿದರೆ ಕೆಲವೇ ತಿಂಗಳಲ್ಲಿ ರಾಜ್ಯದಲ್ಲಿ ರಾಜಕೀಯ ಕ್ರಾಂತಿಯೇ ಆಗುವ ಸಾಧ್ಯತೆ ಇದೆ.

ಹೀಗಾಗಿ ಕಾರ್ಯಕರ್ತರು ಮತ್ತು ಮುಖಂಡರು ಜನರ ಜತೆಯೇ ಇರಬೇಕು. ಜನರ ಕಷ್ಟಗಳಿಗೆ ಸ್ಪಂದಿಸಬೇಕು ಎಂದು ಕೇಂದ್ರ ಸಚಿವರು ಕರೆ ನೀಡಿದರು. ಜನ ಕೆಟ್ಟ ಆಡಳಿತದಿಂದ ರೋಸಿ ಹೋಗಿದ್ದಾರೆ. ತೆರಿಗೆ, ದರ ಏರಿಕೆ ಸುಳಿಗೆಯಿಂದ ಬೇಸತ್ತು ಹೋಗಿದ್ದಾರೆ. ಮುಂದೆ ನಮ್ಮ ಪಕ್ಷಕ್ಕೆ ಒಂದು ಅವಕಾಶ ಕೊಡಿ. ಐದು ವರ್ಷದಲ್ಲಿ ಯಾವ ರೀತಿ ಆಡಳಿತ ಕೊಡಬೇಕು, ಜನರಿಗೆ ಏನೆಲ್ಲ ಒಳ್ಳೆಯದು ಮಾಡಬೇಕು ಎಂಬುದನ್ನು ಸಾಬೀತು ಮಾಡಿ ತೋರಿಸುತ್ತೇನೆ. ಒಂದು ವೇಳೆ ಜನ ಮೆಚ್ಚುವ ಸರ್ಕಾರ ನನ್ನಿಂದ ಕೊಡಲು ಆಗದಿದ್ದರೆ ಈ ಜನ್ಮದಲ್ಲಿ ಮತ್ತೆ ನನ್ನ ಮುಖ ತೋರಿಸಲ್ಲ ಎಂದು ಕುಮಾರಸ್ವಾಮಿ ಅವರು ಸ್ಪಷ್ಟ ಮಾತುಗಳಲ್ಲಿ ಹೇಳಿದರು.

**ಅನಿರೀಕ್ಷಿತ ಮತ್ತು ಸ್ಫೋಟಕ ಬೆಳವಣಿಗೆ**



ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟು ಹೋಗಿದೆ. ರಾಜ್ಯದ ಸಾಲ 7.50 ಲಕ್ಷ ಕೋಟಿ ದಾಟಿದೆ. ಸಿದ್ಧರಾಮಯ್ಯ ಒಬ್ಬರೇ 5ರಿಂದ 5.50 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಏನಕ್ಕೆ ಮಾಡಿದ್ರು, ಇಷ್ಟು ಸಾಲವನ್ನು ಯಾವ ಪುರುಷಾರ್ಥಕ್ಕೆ ಮಾಡಿದ್ರು ಎಂಬುದನ್ನು ಜನರಿಗೆ ಉತ್ತರ ಕೊಡಬೇಕು ಎಂದು ಅವರು ಒತ್ತಾಯ ಮಾಡಿದರು.

**ದೇವೇಗೌಡರನ್ನು ವಂಚಿಸಿದರು!:** ಮಾಜಿ ಪ್ರಧಾನಿಗಳಾದ ದೇವೇಗೌಡರು ತಮ್ಮ ಇಡೀ ಬದುಕನ್ನು ಜನರಿಗೆ ಮೀಸಲಿಟ್ಟರು. ಅವರು ಅಧಿಕಾರಕ್ಕಾಗಿ ಇನ್ನೊಬ್ಬರ ಮನೆ ಬಾಗಿಲಿಗೆ ಹೋದವರಲ್ಲಾ. ಈ ರಾಜ್ಯವನ್ನು ದೀರ್ಘ ಕಾಲ ಆಳಿದ ದೇವರಾಜು ಅರಸು ಅವರೇ ಕುಂಡೆ ಬಂದು ನನ್ನ ನಮ್ಮ ಜೊತೆ ಕೈ ಜೋಡಿಸು ಎಂದು ಹೇಳಿದರು ದೇವೇಗೌಡರು ಕೇಳಲಿಲ್ಲ. ಒಂದು ಆದರ್ಶ, ಮೌಲ್ಯ ಇಟ್ಟುಕೊಂಡು ಅವರು ರಾಜಕಾರಣ ಮಾಡುತ್ತಾ ಬಂದಿದ್ದಾರೆ. ಅಂತಹವರ ಮೇಲೆ ಇಲ್ಲಸಲ್ಲದ ಆಪಾದನೆಗಳನ್ನು ಮಾಡಿದರು.

ದೇವೇಗೌಡರು ಜ್ಯೋತಿಷ್ಯರನ್ನ ನಂಬುತ್ತಾರೆ ಎಂದು ಆ ಜ್ಯೋತಿಷಿಗಳನ್ನು ಟ್ರ್ಯಾಪ್ ಮಾಡಿ ವಂಚಿಸಿದರು. ಅಲ್ಲದೆ, ಮೈಸೂರಿನಲ್ಲಿ ದೇವೇಗೌಡರು 500 ನಿವೇಶನಗಳನ್ನು ಖರೀದಿ ಮಾಡಿದ್ದಾರೆ ಎಂದು ಸುಳ್ಳು ಪ್ರಚಾರ ಮಾಡಿದರು ಎಂದು ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು. ದೇವೇಗೌಡರ ವಿರುದ್ಧ ಸಿಐಡಿ, ಲೋಕಾಯುಕ್ತ ಸೇರಿ ಅನೇಕ ತನಿಖೆಗಳನ್ನು ನಡೆಸಿದರು. ಕೊನೆಗೆ ಸತ್ಯಕ್ಕೆ ಜಯವಾಯಿತು.

ದೇವೇಗೌಡರು ಏನೆಂಬುದು ರಾಜ್ಯದ ಜನತೆಗೆ ತಿಳಿಯಿತು ಎಂದು ಅವರು ಹೇಳಿದರು. ಜನರು ಹಾಗೂ ಕಾರ್ಯಕರ್ತರಿಂದ ಜೆಡಿಎಸ್ ಉಳಿದಿದೆ. ಜನತೆಗೆ ನಮ್ಮ ಕೈಲಾದಷ್ಟು ಒಳ್ಳೆಯದನ್ನು ಮಾಡಿದ್ದೇವೆ. ನಾವೇನು ಅನ್ಯಾಯ ಮಾಡಿದ್ದೇವೆ ಈ ರಾಜ್ಯಕ್ಕೆ ದೇವೇಗೌಡರು ಏನು ಅನ್ಯಾಯ ಮಾಡಿದ್ದಾರೆ ನಮಗೆ ಯಾಕೆ ಪೂರ್ಣ ಪ್ರಮಾಣದ ಆಶೀರ್ವಾದ ಸಿಕ್ಕಿಲ್ಲ ಯಾವ ಸಮುದಾಯಕ್ಕೂ ನಮ್ಮ ಪಕ್ಷದಿಂದ ಅನ್ಯಾಯ ಆಗಿಲ್ಲ. ಬೇರೆ ಬೇರೆ ರಾಜ್ಯಗಳ ಜನರು ದೇವೇಗೌಡರನ್ನು ನೆನಪು ಮಾಡಿಕೊಳ್ಳುತ್ತಾರೆ. ನಮ್ಮ ರಾಜ್ಯದ ಜನತೆಗೆ ಏಕೆ ಅಂತಹ ಭಾವನೆ ಇಲ್ಲ ಎಂದು ಸಚಿವರು ಅತೀವ ಬೇಸರ ವ್ಯಕ್ತಪಡಿಸಿದರು.

**ಗ್ಯಾರಂಟಿ ಹೆಸರಿನಲ್ಲಿ ಸರ್ಕಾರ ದರೋಡೆ ಮಾಡ್ತಿದೆ**

ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಹೆಸರಿನಲ್ಲಿ ಲೂಟಿ ಮಾಡುತ್ತಿದೆ. ಇನ್ನು ಎಷ್ಟು ದರೋಡೆ ಮಾಡುತ್ತೀರಿ ಎಷ್ಟೊಂದು ತೆರಿಗೆಗಳನ್ನು ಏರಿಸಿದಿರಿ ಎಷ್ಟೊಂದು ಬೆಳೆಗಳನ್ನು ಹೆಚ್ಚಳ ಮಾಡಿದಿರಿ ಬಿ ಖಾತಾ ಎ ಖಾತಾ ತೆರಿಗೆ ಎಂದು ದೋಖಾ ಮಾಡುತ್ತಿದೀರಿ. ಬೆಂಗಳೂರಿನಲ್ಲಿ, ರಾಜ್ಯದಲ್ಲಿ ರಸ್ತೆ ಗುಂಡಿಗೆ ಬಿದ್ದು ಎಷ್ಟೋ ಜನ ಸಾವನಪ್ಪಿದ್ದಾರೆ. ಕಬ್ಬು ಬೆಳೆಗಾರರ ಕಬ್ಬಿಗೆ ಬೆಂಕಿ ಹಾಕಿದ್ದು ಯಾರು ಅಂತಾ ಗೊತ್ತಿಲ್ಲಾ. ಈ ಪಾಪ ಸುಮ್ಮನೆ ಹೋಗಲ್ಲ ಎಂದು ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹12,584/Gram24ct ₹11,535/Gram22ct ಬೆಳ್ಳಿ: ₹164.00/Gram


# ಅಧಿಕಾರ ಹಸ್ತಾಂತರ ಮಾಡದಿದ್ದರೆ ಕಾಂಗ್ರೆಸ್ ಧೂಳೀಪಟ

## ಖರ್ಗೆ, ಡಿಕೆ ಸುರೇಶ್ ಸಮ್ಮುಖದಲ್ಲಿ ಅಧಿಕಾರ ಹಂಚಿಕೆಯ ಪ್ರಮಾಣ ನಡೆದಿತ್ತು: ವಿಶ್ವನಾಥ್

• ಉದಯವಾಹಿನಿ, ಮೈಸೂರು

ರಾಜ್ಯ ರಾಜಕೀಯದಲ್ಲಿ ಅಧಿಕಾರ ಹಂಚಿಕೆಯ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದ್ದು, ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಅವರು ಸಿಎಂ ಸಿದ್ದರಾಮಯ್ಯ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಮೈಸೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ, ಸಿಎಂ ಕಾರ್ಯವೈಖರಿಯನ್ನು ಕಟುವಾದ ಶಬ್ದಗಳಲ್ಲಿ ಟೀಕಿಸಿದ್ದಾರೆ. ಅಧಿಕಾರ ಹಂಚಿಕೆ ವಿಷಯದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಡಿ.ಕೆ. ಸುರೇಶ್ ಅವರ ಸಮ್ಮುಖದಲ್ಲಿ ಸಿಎಂ ಸಿದ್ದರಾಮಯ್ಯ ಆಣೆ ಪ್ರಮಾಣ ಮಾಡಿದ್ದರು. ಅಂದು ನೀಡಿದ ಮಾತಿನಂತೆ ನಡೆದುಕೊಂಡು, ಡಿ.ಕೆ. ಶಿವಕುಮಾರ್ ಅವರಿಗೆ ಅಧಿಕಾರ ಹಸ್ತಾಂತರ ಮಾಡದಿದ್ದರೆ ಮುಂದಿನ ದಿನಗಳಲ್ಲಿ

**ಆಶ್ರಯ ನೀಡಿದ್ದು ಕಾಂಗ್ರೆಸ್**



ಕಾಂಗ್ರೆಸ್ ಪಕ್ಷ ಧೂಳೀಪಟವಾಗಲಿದೆ ಎಂದು ವಿಶ್ವನಾಥ್ ಭವಿಷ್ಯ ನುಡಿದರು.

ಈ ಕೂಡಲೇ ಖರ್ಗೆಯವರು ಮಧ್ಯಪ್ರವೇಶಿಸಿ ಡಿಕೆಶಿಗೆ ಸಿಎಂ ಸ್ಥಾನ ನೀಡಬೇಕೆಂದು ಅವರು ಆಗ್ರಹಿಸಿದರು.

**ಧರಣಿ ಮಂಡಲದ ಉಲ್ಲೇಖ ಮತ್ತು ವಚನ ಭ್ರಷ್ಟತೆ:** ಜನಪದ ಕಾವ್ಯ ಧರಣಿ ಮಂಡಲ ಮಧ್ಯದೊಳಗೆ ಪದ್ಯವನ್ನು ಉಲ್ಲೇಖಿಸಿದ ವಿಶ್ವನಾಥ್, ವ್ಯಾಘ್ರಕ್ಕೆ ಮಾತು ಕೊಟ್ಟು ಹಸು ನುಡಿದಂತೆ ನಡೆದ ನಾಡು ನಮ್ಮದು. ಕುರುಬರು ಕೊಟ್ಟ ಮಾತಿಗೆ ತಪ್ಪುವವರಲ್ಲ, ಹಾಲು ಕೆಟ್ಟರೂ ನಮ್ಮ ಸಮುದಾಯ ಕೆಡುವುದಿಲ್ಲ.

ಆದರೆ, ಸಿದ್ದರಾಮಯ್ಯ ಅವರು ಕೊಟ್ಟ ಮಾತು ತಪ್ಪುವ ಮೂಲಕ ಇಡೀ ಕುರುಬ ಸಮಾಜದ ಹೆಸರನ್ನು ಹಾಳು ಮಾಡುತ್ತಿದ್ದಾರೆ. ರಾಜ್ಯದಲ್ಲಿ ವಚನ ಭ್ರಷ್ಟರಾದವರು ಯಾರೂ ಉಳಿದಿಲ್ಲ ಎಂದು ಕಿಡಿಕಾರಿದರು.

**ಗುಂಡಿ ಬಿದ್ದ ರಸ್ತೆಗಳು - ಕುಂಠಿತ ಅಭಿವೃದ್ಧಿ:** ದಿನ ಬೆಳಗಾದರೆ ಕೇವಲ ಪವರ್ ಶೇರಿಂಗ್ ಚರ್ಚೆಗಳೇ ನಡೆಯುತ್ತಿರುವುದರಿಂದ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಸಂಪೂರ್ಣವಾಗಿ ಕುಂಠಿತಗೊಂಡಿವೆ. ರಾಜ್ಯಾದ್ಯಂತ ರಸ್ತೆಗಳು ಗುಂಡಿ ಬಿದ್ದು ಹೋಗಿವೆ.

ಜೆಡಿಎಸ್‌ನಿಂದ ಹೊರಬಂದಾಗ ಸಿದ್ದರಾಮಯ್ಯಗೆ ಆಶ್ರಯ ನೀಡಿದ್ದು ಕಾಂಗ್ರೆಸ್ ಆದರೆ ಈಗ ಅವರೇ ಪಕ್ಷವನ್ನು ಮುಗಿಸಲು ಹೊರಟಿದ್ದಾರೆ ಎಂದು ಆರೋಪಿಸಿದರು.

> ಅಧಿಕಾರ ಹಂಚಿಕೆ ವಿಚಾರದಲ್ಲಿ ಹೈಕಮಾಂಡ್ ನಾಯಕರ ಎದುರು ಮಾಡಿದ ಆಣೆ-ಪ್ರಮಾಣದಂತೆ ನಡೆದುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಉಳಿಗಾಲವಿಲ್ಲ.
> -ಎಚ್ ವಿಶ್ವನಾಥ್, ವಿಧಾನ ಪರಿಷತ್ ಸದಸ್ಯ

**ಸಾಲದ ಸುಳಿ ಮತ್ತು ಮದ್ಯದ ದರ**

ಹಣಕಾಸು ಮಂತ್ರಿಯಾಗಿರುವ ಸಿದ್ದರಾಮಯ್ಯನವರಿಗೆ ಹಣದ ಬೆಲೆ ಗೊತ್ತಿಲ್ಲ. ಸಾಲದ ಮೇಲೆ ಸಾಲ ಮಾಡಿ ಗ್ಯಾರಂಟಿ ಯೋಜನೆಗಳನ್ನು ನೀಡುತ್ತಿದ್ದಾರೆ. ಇನ್ನೊಂದೆಡೆ ಮದ್ಯದ ಬೆಲೆ ಏರಿಕೆಯಿಂದಾಗಿ, ಅದನ್ನು ಕೊಂಡುಕೊಳ್ಳಲಾಗದೆ ಯುವ ಸಮುದಾಯ ಕಡಿಮೆ ಬೆಲೆಗೆ ಸಿಗುವ ಗಾಂಜಾದಂತಹ ಮಾದಕ ವಸ್ತುಗಳ ಮೊರೆ ಹೋಗುತ್ತಿದೆ. ಪ್ರಧಾನಿ ಮೋದಿ ಅಕ್ಕಿ ಕೊಡುತ್ತಿದ್ದರೆ, ಸಿಎಂ ಕೇವಲ ಚೀಲಗಳ ಬಿಡುತ್ತಿದ್ದಾರೆ ಎಂದು ವಿಶ್ವನಾಥ್ ಲೇವಡಿ ಮಾಡಿದರು.

# ಬಂಡೀಪುರದಲ್ಲಿ ಕಾರು ಅಡ್ಡಗಟ್ಟಿ ಚಿನ್ನಾಭರಣ ದರೋಡೆ: ಪೂರ್ವನಿಯೋಜಿತ ಕೃತ್ಯ; ಎಸ್ಪಿ

• ಉದಯವಾಹಿನಿ, ಗುಂಡ್ಲುಪೇಟೆ

ಬಂಡೀಪುರದ ಮದ್ದೂರು ವಲಯದಲ್ಲಿ ಕಾರು ಅಡ್ಡಗಟ್ಟಿ ಚಿನ್ನಾಭರಣ ದೋಚಿರುವುದು ಪೂರ್ವನಿಯೋಜಿತ ಕೃತ್ಯವಾಗಿದೆ ಎಂದು ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಕವಿತಾ ಬಿ.ಟಿ. ಗುಂಡ್ಲುಪೇಟೆಯಲ್ಲಿ ತಿಳಿಸಿದರು. ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಮದ್ದೂರು ವಲಯದಲ್ಲಿ ಜರುಗಿದ ದರೋಡೆ ಪ್ರಕರಣ ಕುರಿತು ಮಾತನಾಡಿದ ಅವರು ಕೇರಳದ ಕ್ಯಾಲಿಕೆಟ್ ನಿವಾಸಿ ವಿನು ಎಂಬಾತ ದರೋಡೆಗೆ ಒಳಗಾದ ವ್ಯಕ್ತಿಯಾಗಿದ್ದು ಆಭರಣ ತಯಾರಿಕೆ ಕೆಲಸ ಮಾಡುತ್ತಿದ್ದಾಗಿ ದೂರಿನಲ್ಲಿ ತಿಳಿಸಿದ್ದಾರೆ.

ಈತ ಮಂಡ್ಯ ಮೂಲದ ರಾಜೇಶ್ ಜ್ಯೂವಲರ್ಸ್‌ನ ಮಾಲೀಕರಿಂದ ಆಭರಣ ತಯಾರಿಕೆಗೆ 800 ಗ್ರಾಂ 24 ಕ್ಯಾರೆಟ್ ಬಂಗಾರದ ಗಟ್ಟಿ ಹಾಗು 518 ಗ್ರಾಂ ಚಿನ್ನವನ್ನ ಕೆ ಎಲ್ 58 ವಿ 1595 ನೋಂದಣೀಯ ವಿಟಾರ ಬ್ರೀಜಾ ಕಾರಿನಲ್ಲಿ ಕಡಕೊಳದಿಂದ ಮೂಲೆಹೊಳೆ ಮಾರ್ಗವಾಗಿ ಕೇರಳಕ್ಕೆ ತರುತ್ತಿದ್ದ ವೇಳೆ ಎರಡು ಇನೋವಾ ಹಾಗೂ 1 ಇಟಿಯೋಸ್ ಕಾರಿನಲ್ಲಿ ಬಂದ ದುಷ್ಕರ್ಮಿಗಳು ಮೊಬೈಲ್ ನೆಟ್ವರ್ಕ್ ಸಿಗದ ಸ್ಥಳದಲ್ಲಿ ಕಾರನ್ನ ಅಡ್ಡಗಟ್ಟಿ ಚಿನ್ನಾಭರಣ ಅಪಹರಿಸಿದ್ದಾರೆ ಎಂದು ದೂರು ನೀಡಿದ್ದಾರೆ ಎಂಬುದಾಗಿ ಮಾಹಿತಿ ನೀಡಿದರು.

**ದುಷ್ಕರ್ಮಿಗಳ ಪತ್ತೆಗೆ ವಿಶೇಷ ತಂಡ ರಚನೆ:** ಪೂರ್ವನಿಯೋಜಿತ ಕೃತ್ಯ ಎಸಗಿರುವ ಅಸಾಮಿಗಳ ಪತ್ತೆಗೆ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಐದು ವಿಶೇಷ ತಂಡವನ್ನ ರಚನೆ ಮಾಡಲಾಗಿದೆ, ಘಟನಾ ಸಂಬಂಧ ಕಣ್ಣೇಗಾಲ ಸಮೀಪದ ಟೋಲ್ ಗೇಟ್‌ನಲ್ಲಿ ಸಿಸಿಟಿವಿ ಕ್ಯಾಮರಾ ಪರಿಶೀಲನೆ ನಡೆಸಿ ವಾಹನದ ದೃಶ್ಯಾವಳಿಯನ್ನ ಸಂಗ್ರಹಿಸಲಾಗಿದ್ದು ಮದ್ದೂರು ಅರಣ್ಯ ಇಲಾಖೆ ಚೆಕ್ಪೋಸ್ಟ್‌ನಲ್ಲಿನ ಸಿಸಿಟಿವಿ ಕ್ಯಾಮರಾಗಳನ್ನು ಸಹ ಪರಿಶೀಲಿಸಲಾಗಿದ್ದು ಆರೋಪಿಗಳ ಎಡೆಮುರಿಕಟ್ಟಲು ಕ್ರಮ ಕೈಗೊಳ್ಳಲಾಗುವುದು ಎಂದರು.

**ಅಲರ್ಟ್ ಆಗಿದೆಯೇ ನೆಟೋರಿಯಸ್ ಕೇರಳ ಗ್ಯಾಂಗ್**

ಈ ಹಿಂದೆಯೂ ಸಹ ಬೇಗೂರು ಸಮೀಪ ಉದ್ಯಮಿಯನ್ನ ಅಪಹರಿಸಿದ್ದ ಒಂದು ತಂಡ ಪೊಲೀಸರ ಬಲೆಗೆ ಬಿದ್ದಿತ್ತು, ಪ್ರಸ್ತುತವಾಗಿ ನಡೆದಿರುವ ಘಟನೆಗೂ ಸಾಮ್ಯತೆ ಇರಬಹುದು ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ, ಬಂಗಾರವನ್ನ ಸಂಗ್ರಹಿಸಿ ಸಾಗಿ ಸುತ್ತಿದ್ದರ ಕುರಿತು ಖಚಿತತೆ ಮೇರೆಗೆ ಕೃತ್ಯ ಎಸಗಿರಬಹುದು, ಪ್ರಕರಣ ಸಂಬಂದ ತನಿಖೆ ನಡೆಸಲಾಗುತ್ತಿದೆ ಕೃತ್ಯದಲ್ಲಿ ಭಾಗಿಯಾದವರ ಎಡೆಮುರಿಕಟ್ಟಲಾಗುವುದು.



-ಡಾ.ಕವಿತಾ ಬಿ.ಟಿ., ಎಸ್ಪಿ

# ಸೌಲಭ್ಯ ಕಲ್ಪಿಸದ ಶಿಕ್ಷಕರ ವಿರುದ್ಧ ವಿದ್ಯಾರ್ಥಿಗಳ ಪ್ರತಿಭಟನೆ

• ಉದಯವಾಹಿನಿ, ಬಾಗೇಪಲ್ಲಿ

ಬಾಲಕರ ಸರ್ಕಾರಿ ಶಾಲೆ ಮುಖ್ಯಶಿಕ್ಷಕರು ವಿದ್ಯಾರ್ಥಿಗಳಿಗೆ ಸೌಲಭ್ಯ ಕಲ್ಪಿಸಿಲ್ಲ. ಮಧ್ಯಾಹ್ನ ಬಿಸಿಯೂಟ ಸಮರ್ಪಕವಾಗಿ ವಿತರಣೆ ಮಾಡುತ್ತಿಲ್ಲ ಎಂದು ಆರೋಪಿಸಿ ಎಸ್‌ಎಫ್‌ಐ ಜಿಲ್ಲಾ ಸಮಿತಿ ನೇತೃತ್ವದಲ್ಲಿ ವಿದ್ಯಾರ್ಥಿಗಳು ತಾಲ್ಲೂಕು ಕ್ಷೇತ್ರಶಿಕ್ಷಣಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು. ಪಟ್ಟಣದ ಡಾ.ಎಚ್.ಎನ್.ವೃತ್ತದಿಂದ ಹೊರಟ ಮುಖಂಡರು, ವಿದ್ಯಾರ್ಥಿಗಳು ಡಿವಿಜಿ ಮುಖ್ಯರಸ್ತೆಯಲ್ಲಿ ಪ್ರತಿಭಟನಾ ಮೆರವಣಿಗೆ ಮಾಡಿದರು.

ಎಸ್‌ಎಫ್‌ಐ ಜಿಲ್ಲಾ ಸಮಿತಿ ಅಧ್ಯಕ್ಷ ಎ.ಸೋಮಶೇಖರ ಮಾತನಾಡಿ, ಪಟ್ಟಣದ ಸರ್ಕಾರಿ ಪ್ರೌಢಶಾಲೆಗೆ ಇತಿಹಾಸ ಇದೆ. ಅನೇಕ ಹಿರಿಯ ಶಿಕ್ಷಕ, ಶಿಕ್ಷಕಿಯರು ಸೇವೆ ಸಲ್ಲಿಸಿದ್ದಾರೆ. ಇಂತಹಾ ಶಾಲೆಗೆ ಕಳಂಕ ತಂದಿರುವುದು ಶೋಚನೀಯ. ಶಾಲೆಯಲ್ಲಿ 280 ವಿದ್ಯಾರ್ಥಿಗಳು ಇದ್ದಾರೆ. ಶಾಲೆಯ ಪ್ರಭಾರ ಮುಖ್ಯಶಿಕ್ಷಕ ವಿ.ವೆಂಕಟೇಶ್ ಸರ್ಕಾರದ ಸೌಲಭ್ಯ ಕಲ್ಪಿಸಿಲ್ಲ. ಮಧ್ಯಾಹ್ನದ ಬಿಸಿಯೂಟ ಮಕ್ಕಳಿಗೆ ಸಮರ್ಪಕವಾಗಿ ವಿತರಣೆ ಮಾಡಿಸುತ್ತಿಲ್ಲ. ಪಡಿತರ ವಸ್ತುಗಳನ್ನು ಹೊರಗೆ ಸಾಗಿಸುತ್ತಿದ್ದಾರೆ. ಬಾಳೆಹಣ್ಣು ಹಾಗೂ ಮೊಟ್ಟೆಗಳನ್ನು ಸರಿಯಾಗಿ ವಿತರಿಸುತ್ತಿಲ್ಲ ಎಂದು ಆರೋಪಿಸಿದರು. ಸರ್ಕಾರದ ಯೋಜನೆಗಳನ್ನು ತಲುಪಿಸುವುದು, ಗುಣಮಟ್ಟದ ಶಿಕ್ಷಣ ಕಲ್ಪಿಸುವುದು ಮುಖ್ಯಶಿಕ್ಷಕರ ಕೆಲಸ. ಮಕ್ಕಳು ಇಲ್ಲದೇ ಸರ್ಕಾರಿ ಶಾಲೆಗಳನ್ನು ಮುಚ್ಚುವ ಹಂತದಲ್ಲಿ ಇದೆ.

ಆದರೆ ವಿದ್ಯಾರ್ಥಿಗಳು ಇದ್ದರೂ, ಸರ್ಕಾರದಿಂದ ವಿತರಣೆ ಆಗಿರುವ ಸೌಲಭ್ಯಗಳನ್ನು ಮಕ್ಕಳಿಗೆ ತಲುಪಿಸದ ಪ್ರಭಾರ ಮುಖ್ಯಶಿಕ್ಷಕನ ವಿರುದ್ಧ ಶಿಸ್ತುಕ್ರಮ ಜರುಗಿಸಬೇಕು. ಕೂಡಲೇ ವರ್ಗಾವಣೆ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನಾ ಸ್ಥಳಕ್ಕೆ ತಾಲ್ಲೂಕು ಪ್ರಭಾರ ಕ್ಷೇತ್ರಶಿಕ್ಷಣಾಧಿಕಾರಿ ವೆಂಕಟರಾಮಪ್ಪ ಆಗಮಿಸಿ ಸಮಸ್ಯೆ ಆಲಿಸಿದರು. ಪ್ರೌಢಶಾಲೆಗೆ ಭೇಟಿ ಮಾಡಿ, ಪರಿಶೀಲನೆ ಮಾಡಲಾಗುವುದು. ಮುಖ್ಯಶಿಕ್ಷಕರ ಜತೆ ಚರ್ಚಿಸಲಾಗುವುದು ಎಂದು ಭರವಸೆ ನೀಡಿದರು. ನಂತರ ಬಾಲಕರ ಸರ್ಕಾರಿ ಪ್ರೌಢಶಾಲೆಗೆ ತಾಲ್ಲೂಕು ಪ್ರಭಾರ ಕ್ಷೇತ್ರಶಿಕ್ಷಣಾಧಿಕಾರಿ ವೆಂಕಟರಾಮಪ್ಪ, ಶಿಕ್ಷಣ ಅಧಿಕಾರಿ ಎನ್.ಶಿವಪ್ಪ, ಪಿ.ಎನ್.ನಾರಾಯಣಸ್ವಾಮಿ, ಮಂಜುನಾಥ್ ಭೇಟಿ ಮಾಡಿದರು. ಅಡುಗೆಕೋಣೆಯಲ್ಲಿ ಇದ್ದ ಪಡಿತರ ವಸ್ತುಗಳನ್ನು ಪರಿಶೀಲನೆ ಮಾಡಿದರು. ಮುಖ್ಯಶಿಕ್ಷಕರ ಜತೆ ಚರ್ಚೆ ಮಾಡಿ, ಮುಂದಿನ ದಿನಗಳಲ್ಲಿ ಸೌಲಭ್ಯಗಳನ್ನು ಮಕ್ಕಳಿಗೆ ತಲುಪಿಸಬೇಕು ಎಂದು ಎಚ್ಚರಿಕೆ ನೀಡಿದರು.



ಉದಯವಾಹಿನಿ ಚಿತ್ರ

**ಸರ್ಕಾರದ ಸೌಲಭ್ಯ ಕಲ್ಪಿಸಿಲ್ಲ**

# ಪಕ್ಷದ ಅಡಿಯಲ್ಲೇ ಚುನಾವಣೆ, ಕಾರ್ಯಕ್ರಮ ನಡೆಯಲಿ: ಅಭಿಷೇಕ್ ದತ್

• ಉದಯವಾಹಿನಿ, ಶಿಡ್ಲಘಟ್ಟ

ಬಿಜೆಪಿಯು ಮತಗಳ್ಳತನದಿಂದ ಅಧಿಕಾರ ಹಿಡಿಯುತ್ತಿದ್ದು ಮುಂದೊಂದು ದಿನ ಮತದಾರರು ಬಿಜೆಪಿಗೆ ತಕ್ಕ ಪಾಠ ಕಲಿಸುತ್ತಾರೆ. ಮತಗಳ್ಳತನಕ್ಕಾಗಿ ಬಿಜೆಪಿಯು ಭಾರಿ ಬೆಲೆ ತೆರಬೇಕಾಗುತ್ತದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ದತ್ ತಿಳಿಸಿದರು. ವೋಟ್ ಚೋರ್ ಗದ್ದಿ ಚೋಡ್ ವಿರುದ್ಧ ಸಹಿ ಸಂಗ್ರಹ ಅಭಿಯಾನದ ಯಶಸ್ಸಿನ ಹಿನ್ನೆಲೆಯಲ್ಲಿ ಶಿಡ್ಲಘಟ್ಟಕ್ಕೆ ಭೇಟಿ ನೀಡಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ದತ್ ಕಾಂಗ್ರೆಸ್ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಿ, ಮುಂಬರುವ ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣೆ ಪೂರ್ವಭಾವಿ ಸಭೆ ನಡೆಸಿ ಮಾತನಾಡಿದರು.

ವೋಟ್ ಚೋರ್ ಗದ್ದಿ ಚೋಡ್ ವಿರುದ್ಧ ಸಹಿ ಸಂಗ್ರಹ ಅಭಿಯಾನ ಕಾರ್ಯಕ್ರಮವನ್ನು ಎಲ್ಲರೂ ಸೇರಿ ಯಶಸ್ವಿಗೊಳಿಸಿದ್ದೀರಿ. ಇದೇ ಹುಮ್ಮಸ್ಸು ಮುಂದಿನ ಎಲ್ಲಾ ಚುನಾವಣೆಗಳಲ್ಲೂ ತೋರಿದರೆ ಮುಂಬರುವ ಎಲ್ಲಾ ಚುನಾವಣೆಗಳಲ್ಲೂ ನಮಗೆ ಗೆಲುವು ಖಚಿತ ಎಂದು ತಿಳಿಸಿದರು. ಶಿಡ್ಲಘಟ್ಟದಲ್ಲಿ ಅಭಿಯಾನಕ್ಕೆ ಉತ್ತಮ ಸ್ಪಂದನೆ ದೊರೆತಿದ್ದು ಯಶಸ್ಸು ಮಾಡಿದ್ದೀರಿ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದಿಯಾಗಿ ಎಲ್ಲಾ ಮುಖಂಡರು ಸಾಮೂಹಿಕವಾಗಿ ಶ್ರಮಿಸಿ ಸಹಿ ಸಂಗ್ರಹ ಅಭಿಯಾನವನ್ನು ಯಶಸ್ವಿಗೊಳಿಸಿ ವಿರೋಧಿಗಳಿಗೆ ಎಚ್ಚರಿಕೆ ರವಾನಿಸಿದ್ದೀರಿ ಎಂದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಸಹನಾ ರಾಜೀವ್ ಗೌಡ ಉತ್ತಮ ಸಂಘಟಕರಾಗಿ ಕಾರ್ಯನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿದೆ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಾರೆಡ್ಡಿ ಅವರು ಸೇರಿ ಎಲ್ಲಾ ನಾಯಕರು ಒಗ್ಗಟ್ಟಾಗಿ ಕಾರ್ಯನಿರ್ವಹಿಸಿ ಪಕ್ಷ ಸಂಘಟನೆ ಮಾಡುತ್ತಿರುವುದಕ್ಕೆ ಅಭಿನಂದನೆ ಸಲ್ಲಿಸಿದರು.

ಆಗ್ನೆಯ ಪದವೀಧರರ ಕ್ಷೇತ್ರದ ಚುನಾವಣೆ ನಡೆಯಲಿದ್ದು ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ಕನಿಷ್ಠ30 ಮತದಾರರನ್ನು ನೋಂದಾಯಿಸಬೇಕು. ಗೆಲುವು ನಮ್ಮದಾಗಲಿದೆ ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಕೇಂದ್ರದಲ್ಲೂ ನಮ್ಮ ಸರ್ಕಾರ ಬರಲಿದೆ. ಯಾರು ಹೆದರುವ, ಆತ್ಮಸ್ಥೈರ್ಯ ಕಳೆದುಕೊಳ್ಳುವ ಅಗತ್ಯವಿಲ್ಲ. ಕಾಂಗ್ರೆಸ್ ಪಕ್ಷದ ತತ್ವಸಿದ್ಧಾಂತಗಳು ಹಾಗೂ ಸಾಧನೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮತದಾರರಿಗೆ, ಜನ ಸಾಮಾನ್ಯರಿಗೆ ತಿಳಿಸುವ ಕೆಲಸ ಆಗಬೇಕು ಎಂದರು.



ಉದಯವಾಹಿನಿ ಚಿತ್ರ

# ಸಡಗರ ಸಂಭ್ರಮದಿಂದ ಜರುಗಿದ ವಾಲ್ಮೀಕಿ ಜಯಂತಿ ಆಚರಣೆ : ವಿವಿಧ ಕಲಾ ತಂಡಗಳ ಮೆರುಗು

• ಉದಯವಾಹಿನಿ, ಗುಂಡ್ಲುಪೇಟೆ

ಪಟ್ಟಣದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನ ಸಂಭ್ರಮದಿಂದ ಆಚರಣೆ ಮಾಡಲಾಯಿತು, ಸಮುದಾಯದ ಬಾಂಧವರು ಮುಖಂಡರು ಯುವಕರು ಒಂದೆಡೆ ಸೇರಿ ಆಯೋಜಿಸಿದ್ದ ಕಾರ್ಯಕ್ರಮದ ಅಂಗವಾಗಿ ಮಹರ್ಷಿಗಳ ಭಾವಚಿತ್ರವನ್ನ ಬೆಳ್ಳಿ ಪಲ್ಲಕ್ಕಿಯಲ್ಲಿರಿಸಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಪಟ್ಟಣದ ಹಳೆ ಬಸ್ ನಿಲ್ದಾಣದಲ್ಲಿ ವಾಲ್ಮೀಕಿ ಮಹರ್ಷಿಗಳ ಭಾವಚಿತ್ರ ಹೊತ್ತ ಬೆಳ್ಳಿ ಪಲ್ಲಕ್ಕಿಗೆ ರಾಜನಹಳ್ಳಿ ವಾಲ್ಮೀಕಿ ಪೀಠದ ಶ್ರೀಪ್ರಸನ್ನಾನಂದ ಸ್ವಾಮಿಗಳು ಚಾಲನೆ ನೀಡಿದರು.

ವಾಲ್ಮೀಕಿ ಸಮುದಾಯ ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಸುಸ್ಥಿರರಾಗಬೇಕು ಇಂತಹ ಧ್ಯೇಯಗಳಿಂದ ಮಾತ್ರ ಸಮುದಾಯದ ಉನ್ನತಿ ಸಾಧ್ಯ ಎಂದು ಮಾರ್ಗದರ್ಶನ ನೀಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿ ಕ್ಷೇತ್ರದಲ್ಲಿನ ನಾಯಕ ಸಮುದಾಯದ ಮುಖಂಡರು ಹಿರಿಯರೊಟ್ಟಿಗೆ ಮಹರ್ಷಿಗಳ ಜಯಂತಿ ಆಚರಣೆ ಮಾಡುತ್ತಿರುವುದು ಸೌಭಾಗ್ಯವೇ ಸರಿ, ಅದರಂತೆ ಮಹರ್ಷಿಗಳ ತತ್ವಾದರ್ಶಗಳನ್ನ ಮೈಗೂಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

**ಕಲಾತಂಡಗಳ ಮೆರುಗು:** ಮೆರವಣಿಗೆಯಲ್ಲಿ ಡೊಳ್ಳು, ತಮಟೆ ಸದ್ದಿಗೆ ತಾಲ್ಲೂಕಿನ ವಿವಿಧ ಹಳ್ಳಿಗಳಿಂದ ಆಗಮಿಸಿದ ಯುವಕರು, ಸಮಾಜದ ಬಾಂಧವರು ಡಿಜೆ ಸದ್ದಿಗೆ ಹೆಜ್ಜೆ ಹಾಕಿ ಕುಣಿದು ಕುಪ್ಪಳಿಸಿದರು. ಅಲ್ಲದೇ, ಮೆರವಣಿಗೆಯಲ್ಲಿ ಪ್ರತಿಯೊಂದು ಹಳ್ಳಿಯಿಂದ ಆಗಮಿಸಿದ ವಾಲ್ಮೀಕಿ ಯುವಕರು ತಮ್ಮ ತಮ್ಮ ವಾಹನಗಳಿಗೆ ದೊಡ್ಡ ಪ್ರಮಾಣದಲ್ಲಿ ವಾಲ್ಮೀಕಿ ಭಾವ ಚಿತ್ರವಿರುವ ಫ್ಲೆಕ್ಸ್‌ಗಳನ್ನು ಕಟ್ಟಿಕೊಂಡು ತಂಡೋಪ ತಂಡವಾಗಿ ಆಗಮಿಸುವ ಮೂಲಕ ಮೆರವಣಿಗೆಯ ಮೆರಗು ಹೆಚ್ಚಿಸಿದರು.

ಆದಿಕವಿ ವಾಲ್ಮೀಕಿ ಮಹರ್ಷಿಗಳ ಭಾವಚಿತ್ರಕ್ಕೆ ಮಾಜಿ ಶಾಸಕ ಸಿ.ಎಸ್.ನಿರಂಜನ್ ಕುಮಾರ್, ಪುರಸಭಾ ಮಾಜಿ ಅಧ್ಯಕ್ಷರುಗಳು, ಸದಸ್ಯರು, ಮುಖಂಡರು ಪುಷ್ಪಾರ್ಚನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಎನ್. ಮಲ್ಲೇಶ್, ಪಿ.ಗಿರೀಶ್, ಶ್ರೀನಿವಾಸ್ ಕಣ್ಣಪ್ಪ, ಕುಮಾರ್, ಪಾಪಣ್ಣ, ಕೃಷ್ಣನಾಯ್ಕ, ಗೋವಿ ನಾಯಕ್, ಸುರೇಶ್ ನಾಯಕ್, ಸೇರಿದಂತೆ ಗ್ರಾಮಗಳ ಯಜಮಾನರು, ಯುವಕರು ಭಾಗವಹಿಸಿದ್ದರು.



ಉದಯವಾಹಿನಿ ಚಿತ್ರ

# ಭಾಷಿಕ, ಸಾಂಸ್ಕೃತಿಕ ಬಿಕ್ಕಟ್ಟಿನಲ್ಲಿ ಕನ್ನಡ: ಬಿಳಿಮಲೆ

• ಉದಯವಾಹಿನಿ, ಕೋಲಾರ

ಕನ್ನಡ ಇವತ್ತು ಭಾಷಿಕ ಹಾಗೂ ಸಾಂಸ್ಕೃತಿಕ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಿದೆ. ಕನ್ನಡದ ಮೇಲಿನ ಆತ್ಮವಿಶ್ವಾಸ ಕುಸಿಯುತ್ತಿದೆ. ಈ ಸಮಸ್ಯೆ ಇತ್ಯರ್ಥಕ್ಕೆ ಸರ್ಕಾರ ಮುಂದಾಗಬೇಕಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದರು. ನಗರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಶಿಕ್ಷಣ ಕಾಲೇಜು ಶಿಕ್ಷಣ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆಶ್ರಯದಲ್ಲಿ ನಡೆದ 70ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಐದು ಸಾವಿರ ಹಳ್ಳಿಗಳಿರುವ ಅಕ್ಕಲಕೋಟೆ ಹೇಗೆ ಮಹಾರಾಷ್ಟ್ರಕ್ಕೆ ಹೋಯಿತು ಐದು ಸಾವಿರಕ್ಕಿಂತ ಹೆಚ್ಚು ಮನೆಗಳಲ್ಲಿ ಕನ್ನಡ ಮಾತನಾಡುತ್ತಾರೆ. ಆದರೆ, ಈಗ ಅವರು ಮರಾಠಿಗರು. ಅವರು ಅನಾಥರಾಗಿದ್ದಾರೆ. ಕಾಸರಗೋಡಿನ ಬದಿಯಡ್ಕ ಹೇಗೆ ಕೇರಳಕ್ಕೆ ಸೇರಿತು ಈ ವಿಚಾರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದರು. ಗಡಿ ಜಿಲ್ಲೆಗಳಲ್ಲಿ ಕನ್ನಡ ಭಾಷೆ ಉಳಿಸುವುದು ಕಷ್ಟ ಎನಿಸುತ್ತಿದೆ. ಬಹುಭಾಷೆ ಇರುವ ಗಡಿಭಾಗದಲ್ಲಿ ಮೊದಲು ಕನ್ನಡ ಭಾಷೆ ಉಳಿಸುವ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ಸಲಹೆ ನೀಡಿದರು.

ಕಾಸರಗೋಡಿನಲ್ಲಿ ಕನ್ನಡ ಓದುವವರಿದ್ದರೆ ಅವರಿಗೆ ಉಚಿತವಾಗಿ ಕನ್ನಡ ಪುಸ್ತಕ ಕೊಡಿ. ಇಲ್ಲದಿದ್ದರೆ ಕನ್ನಡ ಉಳಿಯುವುದಾದರೂ ಹೇಗೆ ಎಂದು ಪ್ರಶ್ನಿಸಿದರು. ತಮಿಳುನಾಡಿನಲ್ಲಿ 15 ದಿನಗಳಿದ್ದು ನಾವು ತಮಿಳು ಕಲಿತರೆ ಬೇರೆ ರಾಜ್ಯದವರು ಕರ್ನಾಟಕದಲ್ಲಿ 15 ವರ್ಷವಿದ್ದರೂ ಕನ್ನಡ ಕಲಿಯಲ್ಲ. ನಾವು ಅನ್ಯ ಭಾಷೆ ಮಾತನಾಡಿದರೆ ಪ್ರಶಂಸನಾ ಪತ್ರವನ್ನು ಬೇರೆ ರಾಜ್ಯದವರು ಕೊಡುವಂಥ ಪರಿಸ್ಥಿತಿ ಬಂದಿದೆ. ಬೇರೆ ಭಾಷೆ ಕಲಿಯುವಾಗ ಕನ್ನಡ ಬಲಿ ಕೊಡುವುದು ಸಮಂಜಸವಲ್ಲ. ಭಾಷೆ ಬಳಸಿದ್ದರೆ ಉಳಿಯುವುದಾದರೂ ಹೇಗೆ? ಬೆಂಗಳೂರಿನಲ್ಲಿ ಶೇ 60ರಷ್ಟು ಹೊರ ರಾಜ್ಯಗಳ ಕಾರ್ಮಿಕರು ವಾಸವಿದ್ದು, ಬೇರೆ ಭಾಷೆ ಕಲಿಯುವುದರ ಜತೆಗೆ ಕನ್ನಡವನ್ನು ಕೊಲೆ ಮಾಡುವ ಕೆಲಸ ನಡೆಸುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.



ಉದಯವಾಹಿನಿ ಚಿತ್ರ

# ಪಿಡಿಒ ಅಮಾನತು ಆದೇಶ ವಜಾ
## ಡಿಸಿ ನಡೆ ವಿರುದ್ಧ ಮೈತ್ರಿ ಪಕ್ಷದ ಆಕ್ರೋಶ

• ಉದಯವಾಹಿನಿ, ಕನಕಪುರ

ಶಿಷ್ಟಾಚಾರ ಉಲ್ಲಂಘನೆ ಆರೋಪದಡಿ ಅಮಾನತುಗೊಂಡಿದ್ದ ಪಿಡಿಒ ಅವರ ಅಮಾನತು ವಜಾಗೊಳಿಸಿರುವ ಜಿಲ್ಲಾಧಿಕಾರಿಗಳ ನಡೆಯನ್ನು ಜೆಡಿಎಸ್ ಮತ್ತು ಬಿಜೆಪಿ ಮುಖಂಡರು ತೀವ್ರ ಖಂಡಿಸಿದ್ದಾರೆ. ನಗರದ ಕೋಟೆ ಗಣೇಶನ ದೇವಸ್ಥಾನದಲ್ಲಿ ಮೈತ್ರಿ ಪಕ್ಷದವರು ನಡೆಸಿದ ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಬಿ.ನಾಗರಾಜು, ಬಿಜೆಪಿ ನಗರ ಘಟಕದ ಅಧ್ಯಕ್ಷ ಮಂಜುನಾಥ್, ದಿಶಾ ಕಮಿಟಿ ಸದಸ್ಯೆ ಶೋಭಾ, ಸ್ಟುಡಿಯೋ ಚಂದ್ರು, ಜೈರಾಮೇಗೌಡ, ಚಿನ್ನಸ್ವಾಮಿ ಮಾತನಾಡಿ, ಜಿಲ್ಲಾಧಿಕಾರಿಗಳು ಪಿಡಿಒ ಶ್ರೀನಿವಾಸ್ ಅವರ ಅಮಾನತು ಆದೇಶ ಹಿಂಪಡೆದು ಅವರನ್ನು ಟಿ.ಬೇಕುಪ್ಪೆ ಪಂಚಾಯಿತಿಗೆ ನಿಯೋಜಿಸಿರುವುದು ಖಂಡನೀಯ ಎಂದರು. ಗ್ರಾಮ ಪಂಚಾಯಿತಿ ಕಟ್ಟಡ ಉದ್ಘಾಟನೆಯಲ್ಲಿ ಕಟ್ಟಡದ ಮೇಲೆ ಭಾವಚಿತ್ರ ಅಳವಡಿಕೆ ಮತ್ತು ಆಹ್ವಾನ ಪತ್ರಿಕೆ ಮುದ್ರಣದಲ್ಲಾಗಿರುವ ಶಿಷ್ಟಾಚಾರ ಉಲ್ಲಂಘನೆಗೆ ಇಒ ಅವರ ವರದಿ ಮೇರೆಗೆ ಟಿ.ಬೇಕುಪ್ಪೆ ಗ್ರಾಮ ಪಂಚಾಯಿತಿ ಪಿಡಿಒ ಶ್ರೀನಿವಾಸ್ ಅವರನ್ನು ಅಮಾನತುಗೊಳಿಸಿದ್ದರು. ಆದರೆ ಈಗ ಜಿಲ್ಲಾಧಿಕಾರಿಗಳು ಯಾರದೋ ಒತ್ತಡಕ್ಕೆ ಮಣಿದು ಅಮಾನತು ಆದೇಶ ಹಿಂಪಡೆದಿದ್ದಾರೆ. ಇಲ್ಲಿ ಪಿಡಿಒ ತಪ್ಪು ಮಾಡದಿದ್ದರೆ, ತಪ್ಪು ವರದಿ ನೀಡಿರುವ ಇಒ ಅವರನ್ನು ಜಿಲ್ಲಾಧಿಕಾರಿ ಅಮಾನತು ಮಾಡಬೇಕು ಎಂದು ಆಗ್ರಹಿಸಿದರು. ಅಧಿಕಾರಿಗಳು ಯಾರದೋ ಒತ್ತಡಕ್ಕೆ ಮಣಿದು, ಅವರಿಗೆ ಬೇಕಾದ ರೀತಿ ಕೆಲಸ ಮಾಡುತ್ತಿದ್ದಾರೆ. ಇನ್ನಾದರೂ ಅಧಿಕಾರಿಗಳು ಎಚ್ಚೆತ್ತು ಸಾರ್ವಜನಿಕರ ಕೆಲಸ ಮಾಡಬೇಕು. ಇಲ್ಲದಿದ್ದರೆ ಮೈತ್ರಿ ಪಕ್ಷವ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

# ಮಿನಿ ನ್ಯೂಸ್

## ಅನುಮತಿ ಇಲ್ಲದೆ ಪ್ಲೆಕ್ಸ್ ಹಾಕಿದರೆ ಕ್ರಮ

• ಉದಯವಾಹಿನಿ, ರಾಮನಗರ

ನಗರಸಭೆ ಕೈಗೊಂಡಿರುವ 'ಮನೆ ಮನೆಗೆ ಇ-ಖಾತೆ' ಅಭಿಯಾನದಡಿ ಇದುವರೆಗೆ 8 ಸಾವಿರ ಇ-ಖಾತೆಗಳನ್ನು ಸೃಷ್ಟಿಸಿ ವಿತರಣೆ ಮಾಡಲಾಗಿದೆ ಎಂದು ನಗರಸಭೆ ಅಧ್ಯಕ್ಷೆ ಕೆ.ಶೇಷಾದ್ರಿ, ಶಶಿ ತಿಳಿಸಿದರು. ನಗರಸಭೆ ಸಭಾಂಗಣದಲ್ಲಿ ಅರ್ಜಿದಾರರಿಗೆ ಇ-ಖಾತೆ ವಿತರಿಸಿದ ಸಂದರ್ಭದಲ್ಲಿ ಮಾತನಾಡಿದ ಅವರು, ಆಗಾಗ ತಲೆದೋರುವ ಸರ್ವರ್ ಹಾಗೂ ತಾಂತ್ರಿಕ ಸಮಸ್ಯೆಗಳ ನಡುವೆಯೂ ಈ ಅಭಿಯಾನ ಯಶಸ್ವಿಯಾಗಿ ನಡೆಯುತ್ತಿದೆ. ಸರ್ವರ್ ಸಮಸ್ಯೆ ನಿವಾರಿಸುವಂತೆ ಪೌರಾಡಳಿತ ನಿರ್ದೇಶನಾಲಯದ ಅಧಿಕಾರಿಗಳ ಗಮನಕ್ಕೂ ತರಲಾಗಿದೆ ಎಂದರು. ನಗರದಲ್ಲಿ ಎಲ್ಲೆಡೆ ಕಸ ಎಸೆಯದಂತೆ ನಿತ್ಯ ಜಾಗೃತಿ ಮೂಡಿಸಲಾಗುತ್ತಿದೆ. ವಿದ್ಯಾವಂತರೇ ತ್ಯಾಜ್ಯವನ್ನು ರಸ್ತೆಬದಿ ಸೇರಿದಂತೆ ಎಲ್ಲೆಡೆ ಎಸೆಯುತ್ತಿದ್ದಾರೆ. ಎಲ್ಲರೂ ತ್ಯಾಜ್ಯವನ್ನು ನಗರಸಭೆ ಕಸ ಸಂಗ್ರಹ ವಾಹನಗಳಿಗೆ ನೀಡಬೇಕು ಎಂದರು. ನಗರಸಭೆ ಅನುಮತಿ ಪಡೆಯದೆ ಫ್ಲೆಕ್ಸ್ ಅಳವಡಿಸಿದರೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು. ಯಾವುದೇ ಪಕ್ಷ, ಸಂಘಟನೆಯಾಗಲಿ ಅನುಮತಿ ಪಡೆಯುವುದು ಕಡ್ಡಾಯ. ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

## ಗುಲಾಬಿ ನೀಡಿ ಹೆಲ್ಮೆಟ್ ಜಾಗೃತಿ

• ಉದಯವಾಹಿನಿ, ಕುಣಿಗಲ್

ಪಟ್ಟಣದ ಹುಚ್ಚಮಾಸ್ತಿಗೌಡ ವೃತ್ತ ಮತ್ತು ಗ್ರಾಮ ದೇವತಾ ವೃತ್ತದಲ್ಲಿ ಪೊಲೀಸರು ಜಾಗೃತಿ ಮೂಡಿಸಿದರು. ಸಿಪಿಐ ಮಾದ್ಯಾ ನಾಯಕ್, ಪಿಎಸ್‌ಐ ಅಮೂಲ್ ಹೇಮಗಿರಿ ನೇತೃತ್ವದಲ್ಲಿ ಸಿಬ್ಬಂದಿಗಳು ಜಾಗೃತಿ ಮೂಡಿಸಿದ್ದು, ಹೆಲ್ಮೆಟ್ ಧರಿಸಿ ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನ ಸವಾರರಿಗೆ ಗುಲಾಬಿ ನೀಡಿ ಧನ್ಯವಾದ ತಿಳಿಸಿದರು.

ಹೆಲ್ಮೆಟ್ ಧರಿಸದ ಸವಾರರಿಗೆ ಹೆಲ್ಮೆಟ್ ಧಾರಣೆಯಿಂದಾಗುವ ಪ್ರಯೋಜನಗಳನ್ನು ತಿಳಿಸಿದರು. ಪತ್ನಿ, ಮಕ್ಕಳು, ಕುಟುಂಬದ ಹಿತದೃಷ್ಟಿಯಿಂದ ಮತ್ತು ಕಾನೂನು ಪರಿಪಾಲನೆ ದೃಷ್ಟಿಯಿಂದ ಹೆಲ್ಮೆಟ್ ಧರಿಸಿ ವಾಹನ ಚಾಲನೆ ಮಾಡುವಂತೆ ಗುಲಾಬಿ ಹೂವು ನೀಡಿ ಮನವಿ ಮಾಡಿದರು. ಮೊದಲು ಜಾಗೃತಿ ಮೂಡಿಸಲಾಗಿದೆ. ನಂತರ ಎಚ್ಚರಿಕೆ ನೀಡಲಾಗುವುದು. ಆನಂತರ ಹೆಲ್ಮೆಟ್ ಧಾರಣೆ ಕಡ್ಡಾಯಗೊಳಿಸಿ, ಧರಿಸದಿದ್ದರೆ ದಂಡ ವಸೂಲಿ ಮಾಡಲಾಗುವುದು ಎಂದು ಸಿಪಿಐ ಮಾದ್ಯಾ ನಾಯಕ್ ತಿಳಿಸಿದ್ದಾರೆ.

## ಅಬ್ದುಲ್ ರಹಿಮಾನ್ ಕೊಲೆ ಪ್ರಕರಣ ತನಿಖೆಗೆ ಕಾಲಾವಕಾಶ ವಿಸ್ತರಿಸಲು ನಕಾರ

• ಉದಯವಾಹಿನಿ, ಮೈಸೂರು

ಬಂಟ್ವಾಳದಲ್ಲಿ ಕಳೆದ ಮೇ 27ರಂದು ನಡೆದಿದ್ದ ಅಬ್ದುಲ್ ರಹಿಮಾನ್ ಕೊಲೆ ಪ್ರಕರಣದ 14 ಆರೋಪಿಗಳ ವಿರುದ್ಧದ ಕೋಕಾ ಪ್ರಕರಣದ ತನಿಖೆಗೆ ಕಾಲಾವಕಾಶ ವಿಸ್ತರಿಸಬೇಕೆಂದು ಕೋರಿ ಪೊಲೀಸರು ಸಲ್ಲಿಸಿದ್ದ ಅರ್ಜಿಯನ್ನು ಮೈಸೂರು ಜಿಲ್ಲಾ ಪ್ರಧಾನ ಸೆಷನ್ಸ್ ಹಾಗೂ ವಿಶೇಷ (ಕೋಕಾ) ನ್ಯಾಯಾಲಯವು ಶನಿವಾರ ವಜಾಗೊಳಿಸಿ ಆದೇಶಿಸಿದೆ. ಪ್ರಕರಣದಲ್ಲಿ ಸುಮಿತ್.ಬಿ, ದೀಪಕ್, ವಿ.ರವಿರಾಜ ಮೂಲ್ಯ, ಪೃಥ್ವಿರಾಜ್ ಜೋಗಿ, ಚಿಂತನ್, ಅಭಿನ್ ರೈ, ತೇಜಾಕ್ಷ, ಶಿವಪ್ರಸಾದ್ ತುಂಬೆ, ಪ್ರದೀಪ, ಶಾಹಿತ್, ಸಚಿನ್, ರಂಜಿತ್, ರವಿಸಂಜಯ್ ಅವರನ್ನು ಬಂಟ್ವಾಳ ಗ್ರಾಮಾಂತರ ಪೊಲೀಸರು ಬಂಧಿಸಿ, ವಿಚಾರಣೆ ನಡೆಸಿ ಬಂಟ್ವಾಳ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ಆರೋಪಿಯಾಗಿದ್ದ ಭರತ್ ಕುಮೇಲು ತಲೆಮರೆಸಿಕೊಂಡಿದ್ದರು. ಮಂಗಳೂರಿನ 2ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ವಿಚಾರಣೆ ಮುಂದುವರೆಯುತ್ತಿರುವಾಗ, ಭರತ್ ಕುಮ್ಮೆಲು ಮತ್ತೊಂದು ಪ್ರಕರಣದಲ್ಲಿ ಪೊಲೀಸರಿಗೆ ಶರಣಾದರು. ಆ ವೇಳೆ ಪೊಲೀಸರು ಅವರನ್ನು ವಶಕ್ಕೆ ಪಡೆದು, 14 ಆರೋಪಿಗಳ ಮೇಲೆ ಕೋಕಾ ಕಾಯ್ದೆಯಡಿ ತನಿಖೆ ನಡೆಸಲು ಅವಕಾಶ ಕೇಳಿದರು. ಮೈಸೂರು ನ್ಯಾಯಾಲಯದಲ್ಲಿ ಕೋಕಾ ವಿಶೇಷ ನ್ಯಾಯಾಲಯ ಇರುವುದರಿಂದ ಇಲ್ಲಿಗೆ ಪ್ರಕರಣ ವರ್ಗಾವಣೆಗೊಂಡಿತ್ತು.

ಪೊಲೀಸರು ವಿಚಾರಣೆಗಾಗಿ ಆರೋಪಿಗಳನ್ನು ಕಸ್ಟಡಿಗೆ ಕೇಳಿದ್ದರಿಂದ ನ್ಯಾಯಾಲಯವು 12 ದಿನ ಕಸ್ಟಡಿಗೆ ಒಪ್ಪಿಸಿತ್ತು. ಈಚೆಗೆ ಪೊಲೀಸರು ತನಿಖೆಗೆ ಕಾಲಾವಕಾಶ ವಿಸ್ತರಣೆ ಕೋರಿ ಅರ್ಜಿ ಸಲ್ಲಿಸಿದ್ದರು. ಆರೋಪಿಗಳ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿ, ಕೋಕಾ ನಿಯಮದಂತೆ 90 ದಿನಗಳೊಗಾಗಿ ಹೆಚ್ಚುವರಿ ಸಮಯಾವಕಾಶ ಕೇಳಬೇಕಿತ್ತು. ಪೊಲೀಸರು ಸಮಯ ಮೀರಿ ಅರ್ಜಿ ಸಲ್ಲಿಸಿದ್ದಾರೆ ಎಂದು ವಾದ ಮಂಡಿಸಿದರು. ಪ್ರಧಾನ ಜಿಲ್ಲಾ, ನ್ಯಾಯಾಧೀಶರಾದ ಉಷಾರಾಣಿ ವಾದ- ಪ್ರತಿವಾದ ಆಲಿಸಿ, ಕಾಲಾವಕಾಶ ವಿಸ್ತರಣೆ ಕೋರಿ ಪೊಲೀಸರು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ್ದು, ಪ್ರಕರಣವನ್ನು ಮಂಗಳೂರಿನ 2ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯಕ್ಕೆ ವರ್ಗಾಯಿಸಿ ಡಿ.2ಕ್ಕೆ ಆರೋಪಿಗಳನ್ನು ಹಾಜರುಪಡಿಸಬೇಕು ಎಂದು ಆದೇಶಿಸಿದರು.

# ಜನಪರ ಆಡಳಿತ, ರೈತರಿಗೆ ಹೆಚ್ಚಿನ ಸಾಲ ಸೌಲಭ್ಯ ಒದಗಿಸಲು ಕ್ರಮ

## ಸಚಿನ್‌ಗೆ ಮಂಡ್ಯ ಡಿಸಿಸಿ ಬ್ಯಾಂಕ್ ಚುಕ್ಕಾಣಿ, ಸಚಿವ ಚಲುವರಾಯಸ್ವಾಮಿ ಪುತ್ರನಿಗೆ ಅಧ್ಯಕ್ಷ ಗಾದಿ

• ಉದಯವಾಹಿನಿ, ಮಂಡ್ಯ

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ನೂತನ ಅಧ್ಯಕ್ಷರಾಗಿ ನಿರೀಕ್ಷೆಯಂತೆ ಮಂಡ್ಯ ಜಿಲ್ಲಾ ಉಸ್ತುವಾರಿ ಮತ್ತು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರ ಪುತ್ರ ಸಿ. ಸಚಿನ್ ಚಲುವರಾಯಸ್ವಾಮಿ ಅವಿರೋಧ ಆಯ್ಕೆಯಾಗಿದ್ದಾರೆ. ಇವರೊಂದಿಗೆ ಮದ್ದೂರಿನ ಸಿ. ಚಲುವರಾಜು ಅವರು ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. 12 ನಿರ್ದೇಶಕರ ಬಲದ ಎಂಡಿಸಿಸಿ ಬ್ಯಾಂಕ್‌ನಲ್ಲಿ ಒಬ್ಬರಷ್ಟೇ ಜೆಡಿಎಸ್ ಬೆಂಬಲಿತ ನಿರ್ದೇಶಕರಿದ್ದು, ಉಳಿದ 11 ಮಂದಿಯೂ ಕಾಂಗ್ರೆಸ್ ಬೆಂಬಲಿತರು. ಹೀಗಾಗಿ ಕಾಂಗ್ರೆಸ್ ಬೆಂಬಲಿಗರ ಪಡೆಗೆ ಅಧಿಕಾರ ಸಿಗುವುದು ಖಚಿತವಾಗಿದ್ದರೂ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕಾಗಿ ಪೈಪೋಟಿ ಶುರುವಾಗಿತ್ತು. ಕಡೆಗೆ ನಾಗಮಂಗಲ ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ನಿರ್ದೇಶಕರಾಗಿ ಆಯ್ಕೆಯಾಗಿದ್ದ ಸಿ. ಸಚಿನ್ ಚಲುವರಾಯಸ್ವಾಮಿ ಅವರ ರಂಗ ಪ್ರವೇಶವಾಯಿತು.

**ಅಧಿಕಾರ ಸಿಗುವುದು ಖಚಿತ**

ಹೀಗಾಗಿ ಸಚಿವರ ಮಗನೆಂಬ ಕಾರಣಕ್ಕೆ ಆಕಾಂಕ್ಷಿತರೆಲ್ಲರೂ ಸಚಿನ್ ಆಯ್ಕೆಗೆ ಸಹಮತ ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಕುಮಾರಕೃಪದಲ್ಲಿ ಸಚಿವ ಎನ್. ಚಲುವರಾಯಸ್ವಾಮಿ ನೇತೃತ್ವದಲ್ಲಿ ನಡೆದ ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಶಾಸಕರು, ಎಂಡಿಸಿಸಿ ಬ್ಯಾಂಕ್ ನಿರ್ದೇಶಕರು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸಚಿನ್ ಚಲುವರಾಯಸ್ವಾಮಿ ಅವರನ್ನೇ ಅಖೈರುಗೊಳಿಸಲಾಯಿತು. ಉಪಾಧ್ಯಕ್ಷ ಸ್ಥಾನವನ್ನು ಮದ್ದೂರಿಗೆ ಕೊಡಲು ತೀರ್ಮಾನಿಸಿ, ಆಕಾಂಕ್ಷಿತರಾದ ಪಿ. ಸಂದರ್ಶ, ಸಿ. ಚಲುವರಾಜು ಇಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡುವ ಜವಾಬ್ದಾರಿಯನ್ನು ಕ್ಷೇತ್ರದ ಶಾಸಕ ಕೆ.ಎಂ. ಉದಯ ಅವರಿಗೆ ನೀಡಲಾಗಿತ್ತು. ಅದರಂತೆ ಶಾಸಕರು ಚಲುವರಾಜು ಹೆಸರನ್ನು ಸೂಚಿಸಲಾಗಿ, ಉಪಾಧ್ಯಕ್ಷ ಸ್ಥಾನಕ್ಕೆ ಚಲುವರಾಜು ಹೆಸರು ಅಂತಿಮವಾಗಿತ್ತು. ಅದರಂತೆ ಚುನಾವಣೆ ದಿನವಾದ ಅಧ್ಯಕ್ಷ ಸ್ಥಾನಕ್ಕೆ ಸಿ. ಸಚಿನ್ ಚಲುವರಾಯಸ್ವಾಮಿ, ಉಪಾಧ್ಯಕ್ಷ ಸ್ಥಾನಕ್ಕೆ ಸಿ. ಚಲುವರಾಜು ಅವರಿಬ್ಬರು ಮಾತ್ರವೇ ನಾಮಪತ್ರ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯೂ ಆದ ಮಂಡ್ಯ ಉಪ ವಿಭಾಗಾಧಿಕಾರಿ ಎಂ. ಶಿವಮೂರ್ತಿ ಅವರು ಅವಿರೋಧ ಆಯ್ಕೆ ಪ್ರಕಟಿಸಿದರು. ಬಳಿಕ ನೂತನ ಅಧ್ಯಕ್ಷ, ಉಪಾಧ್ಯಕ್ಷ ಇಬ್ಬರಿಗೂ ಚುನಾವಣಾಧಿಕಾರಿ ಹೂಗುಚ್ಛ ನೀಡಿ ಅಭಿನಂದಿಸಿದರು. ಎಂಡಿಸಿಸಿ ಬ್ಯಾಂಕಿನ ಎಲ್ಲಾ ನಿರ್ದೇಶಕರು, ಕಾಂಗ್ರೆಸ್ ಮುಖಂಡರು ಬ್ಯಾಂಕಿನ ನೂತನ ವರಿಷ್ಠರಿಗೆ ಅಭಿನಂದನೆ ಸಲ್ಲಿಸಿದರು. ಕಾಂಗ್ರೆಸ್ ಕಾರ್ಯಕರ್ತರು ಕಿವಿಗಡಚ್ಚುಕ್ಕುವ ಪಟಾಕಿಗಳನ್ನು ಸಿಡಿಸಿ ವಿಜಯೋತ್ಸವ ಆಚರಿಸಿ ಸಂಭ್ರಮಿಸಿದರು.ಮುಂದಿನ ದಿನಗಳಲ್ಲಿ ಮಂಡ್ಯ ಜಿಲ್ಲೆಯ ಸಹಕಾರಿ ಬಂಧುಗಳು, ರೈತಪರ ಚಿಂತನೆಯೊಂದಿಗೆ ಕೈಗಾರಿಕೆಗೂ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಎಂಡಿಸಿಸಿ ಬ್ಯಾಂಕ್ ಕಾರ್ಯ ನಿರ್ವಹಿಸುತ್ತದೆ. ಬ್ಯಾಂಕಿನ ನೂತನ ಅಧ್ಯಕ್ಷ, ಉಪಾಧ್ಯಕ್ಷ ಇಬ್ಬರನ್ನೂ ಅಭಿನಂದಿಸುತ್ತೇನೆ, ಎಂದರು.



ಉದಯವಾಹಿನಿ ಚಿತ್ರ

> ನಿತ್ಯ ಸಚಿವ ಕೆ.ವಿ. ಶಂಕರಗೌಡರು ಸ್ಥಾಪಿಸಿದ ಎಂಡಿಸಿಸಿ ಬ್ಯಾಂಕ್ ಈವರೆಗೆ ಉತ್ತಮ ಕೆಲಸ ಮಾಡಿಕೊಂಡು ಬರುತ್ತಿದೆ. ಕಳೆದ ಎರಡೂವರೆ ವರ್ಷಗಳಿಂದ ಜೋಗಿಗೌಡರು ಸಹ ಉತ್ತಮ ಕಾರ್ಯಗಳನ್ನು ರೂಪಿಸಿಕೊಂಡು ಬಂದಿದ್ದಾರೆ. ಮುಂದಿನ ದಿನಗಳಲ್ಲಿ ಎಂಡಿಸಿಸಿ ಬ್ಯಾಂಕ್‌ನ ಎಲ್ಲಾ ಸಿಬ್ಬಂದಿ ವರ್ಗದವರೊಂದಿಗೆ ಸಮನ್ವಯ ಸಾಧಿಸಿ ಉತ್ತಮ ಕೆಲಸ ಮಾಡಲಾಗುವುದು ಎಂದು ಹೇಳಿದರು. ರೈತರಿಗೆ ಬ್ಯಾಂಕ್‌ನಿಂದ ಹೆಚ್ಚಿನ ಸಾಲ ಸೌಲಭ್ಯ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ನನ್ನ ತಂದೆ ಸಚಿವ ಎನ್. ಚಲುವರಾಯಸ್ವಾಮಿ ಅವರೊಡಗೂಡಿ ಮನವಿ ಮಾಡಿ, ಅನುದಾನ ತರಲಾಗುವುದು. ನನ್ನ ಅವಧಿಯಲ್ಲಿ ಜನಪರ ಆಡಳಿತ ನೀಡುವುದು ತಮ್ಮ ಗುರಿಯಾಗಿದೆ.
> - ಸಿ. ಸಚಿನ್ ಚಲುವರಾಯಸ್ವಾಮಿ

**ಪಿಎಂಎನ್ ಅಪೆಕ್ಸ್‌ಬ್ಯಾಂಕ್ ಪ್ರತಿನಿಧಿ ಸಾಧ್ಯತೆ**

ಮಳವಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರೂ ಆದ ಪಿ.ಎಂ. ನರೇಂದ್ರಸ್ವಾಮಿ ಅವರು ಎಂಡಿಸಿಸಿ ಬ್ಯಾಂಕಿನ ನಿರ್ದೇಶಕರೂ ಆಗಿದ್ದಾರೆ. ಇದೀಗ ಎಂಡಿಸಿಸಿ ಬ್ಯಾಂಕ್‌ನಿಂದ ಅಪೆಕ್ಸ್ ಬ್ಯಾಂಕ್ ಪ್ರತಿನಿಧಿಯಾಗಿ ನರೇಂದ್ರಸ್ವಾಮಿ ಅವರು ಆಯ್ಕೆಯಾಗುವುದು ಖಚಿತವಾಗಿದೆ. ಈ ಹಿನ್ನೆಲೆಯಲ್ಲಿ ಚುನಾವಣಾ ಪ್ರಕ್ರಿಯೆ ಮುಗಿದ ಬಳಿಕ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಪಿ.ಎಂ. ನರೇಂದ್ರಸ್ವಾಮಿ, ಎಂಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿ ಚುನಾವಣೆಯಲ್ಲಿ ಮೊದಲ ಬಾರಿಗೆ ಹೆಚ್ಚಿನ ಬಹುಮತ ಪಡೆದು ಒಮ್ಮತದ ನಿರ್ಧಾರಕ್ಕೆ ಬಂದು ಒಗ್ಗಟ್ಟನ್ನು ಸಾಧಿಸಿದ್ದೇವೆ. ಇದರ ಯಶಸ್ಸು, ಈ ಒಗ್ಗಟ್ಟು ಸಾಧಿಸಲು ಸಹಕಾರಿಯಾದ ಪಕ್ಷದ ಎಲ್ಲಾ ನಾಯಕರಿಗೆ ಸಲ್ಲುತ್ತದೆ ಎಂದು ಹೇಳಿದರು.

ಪ್ರಿಯಾಂಕ್ ಖರ್ಗೆ ಸೈದ್ಧಾಂತಿಕ ಹೋರಾಟಗಾರರು: ಸಂವಿಧಾನದಿಂದಲ್ಲೇ ಎಲ್ಲವೂ ನಡೆಯಲಿ: ಕೆಪಿಸಿಸಿ ಸುಭಾಷ್ ರಾಠೋಡ


# ರಾಜ್ಯದಲ್ಲೇ ಅತ್ಯಂತ ಕ್ರೀಯಾಶೀಲ ಸಚಿವರಲ್ಲಿ ಪ್ರೀಯಾಂಕ್ ಖರ್ಗೆ ಒಬ್ಬರು

• ಉದಯವಾಹಿನಿ, ಚಿಂಚೋಳಿ

ರಾಜ್ಯದಲ್ಲೇ ಅತ್ಯಂತ ಕ್ರೀಯಾಶೀಲ ಸಚಿವರಲ್ಲಿ ಪ್ರೀಯಾಂಕ್ ಖರ್ಗೆ ಒಬ್ಬರಾಗಿದ್ದು ಇವರು ಸೈದ್ಧಾಂತಿಕ ಹೋರಾಟಗಾರರಿದ್ದು ಸಂವಿಧಾನದಿಂದಲ್ಲೇ ಎಲ್ಲವೂ ನಡೆಯಬೇಕು ಎಂಬ ದೃಷ್ಟಿಕೋನ ಇಟ್ಟುಕೊಂಡು ಮಾತನಾಡುತ್ತಾರೆ ಎಂದು ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ ಹೇಳಿದರು.

ಪಟ್ಟಣದ ವೀರೇಂದ್ರ ಪಾಟೀಲ ಪಬ್ಲಿಕ್ ಶಾಲೆಯ ಜಾಗೀರದಾರ್ ಸಭಾಂಗಣದಲ್ಲಿ ತಾಲ್ಲೂಕಾ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಆರ್‌ಡಿಪಿಆರ್ ಐಟಿಬಿಟಿ ಸಚಿವ ಪ್ರೀಯಾಂಕ್ ಖರ್ಗೆ ಹುಟ್ಟುಹಬ್ಬದ ಅಂಗವಾಗಿ ಹಮ್ಮಿಕೊಂಡಿದ್ದ ಉಚಿತ ನೇತ್ರ ತಪಾಸಣೆ ಮತ್ತು ಆರೋಗ್ಯ ತಪಾಸಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಖರ್ಗೆಯವರು ಆರ್‌ಎಸ್‌ಎಸ್ ಬಿಜೆಪಿ ಜೆಡಿಎಸ್ ಪಕ್ಷಗಳ ವಿರುದ್ಧ ಮಾತನಾಡುವಾಗ ದಾಖಲೆ ಸಮೇತ ಮಾತನಾಡುತ್ತಾ ವೈಚಾರಿಕ ವೈರಾತ್ವದಿಂದ ಮಾತನಾಡುತ್ತಾರೆ. ದೇಶದಲ್ಲಿ ಸಂವಿಧಾನ ಪ್ರಕಾರ ಎಲ್ಲವೂ ನಡೆಯಬೇಕು ಗೌರವ ಕೊಡಬೇಕು ಎಂಬುವುದೆ ಅವರ ಗುರಿಯಾಗಿದೆ, ಚಿಕ್ಕ ವಯಸ್ಸಿನಲ್ಲೇ ರಾಜ್ಯದಲ್ಲಿ ಅತ್ಯಂತ ಅಭಿವೃದ್ಧಿ ಕೆಲಸಗಳು ಮಾಡುತ್ತಿದ್ದಾರೆ ಎಂದರು. ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ್ ಅವರು ಸಚಿವ ಪ್ರೀಯಾಂಕ್ ಖರ್ಗೆಯವರ ಹುಟ್ಟುಹಬ್ಬದ ಅಂಗವಾಗಿ ವ್ಯಯಕ್ತಿಕವಾಗಿ ಪೌರ ಕಾರ್ಮಿಕರಿಗೆ ಬೆಡ್ ಶೀಡ್ ಉಚಿತವಾಗಿ ವಿತರಿಸಿ ಮಾತನಾಡಿದ ಅವರು, ಪ್ರೀಯಾಂಕ್ ಖರ್ಗೆಯವರು ಐಟಿಬಿಟಿ ಸಚಿವರಾದ ಮೇಲೆ ವಿದೇಶಗಳು ಸುತ್ತಾಡಿ ವಿವಿಧ ಅನೇಕ ಯೋಜನೆಗಳು, ಕಾರ್ಖಾನೆಗಳು ಕರ್ನಾಟಕ ರಾಜ್ಯದಲ್ಲಿ ತಂದು ಯುವಕರಿಗೆ ಉದ್ಯೋಗ ಸೃಷ್ಟಿ ಮಾಡಿದ್ದಾರೆ, ಆರ್‌ಡಿಪಿಆರ್ ಸಚಿವರಾಗಿ ರಾಜ್ಯಾದ್ಯಂತ ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿಯು ಮಾಡಿದ್ದಾರೆ, ಪ್ರಬುದ್ಧ ರಾಜಕಾರಣಿಯಾಗಿ ಗ್ರಾಪಂ ವಲಯಗಳಲ್ಲಿ ಅನೇಕ ಬಡವರ ದಿನದಲಿತರಿಗೆ ಕೆಲಸ ನೀಡಿ ಅನೇಕ ಯೋಜನೆಗಳು ಮನೆ ಮನೆಗೆ ಮುಟ್ಟಿಸಿ ಕಣ್ಣೋರಿಸುವ ಕೆಲಸ ಮಾಡಿದ್ದಾರೆ ಎಂದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಬಾಷೀದ್, ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಮಾಲಿ ಮಾತನಾಡಿದರು. ಲಕ್ಷ್ಮಣ ಆವುಂಟಿ ಸ್ವಾಗತಿಸಿದರು, ಶರಣುಪಾಟೀಲ ಮೋತಕಪಳ್ಳಿ ನಿರೂಪಿಸಿದರು, ನಾಗೇಶ ಗುಣಾಜೀ ವಂದಿಸಿದರು. ಬಾಬುರಾವ ಪಾಟೀಲ, ಶೈಲೇಶ್ ಹುಲಿ, ಜಿಪಂ ಮಾಜಿ ಸದಸ್ಯ ಧೂಳಪ್ಪ ಬೀರನಳ್ಳಿ, ನರಸಿಂಹಮ್ಲು ಕುಂಬಾರ, ಪ್ರವೀಣ ಟಿಟಿ, ಶಬ್ಬೀರ ಅಹೇಮದ್, ವಿಶ್ವನಾಥ ಬೀರನಳ್ಳಿ, ಜಗನ್ನಾಥ ಗುತ್ತೇದಾರ, ಮಸೂದ್ ಸೌದಾಗಾರ, ಹಾದಿಸಾಬ, ಖಲೀಲ್ ಪಟೇಲ, ರಾಮಶೇಟ್ಟಿ ಪವ್ಹಾರ, ಡಾ.ಅಂಜನಯ್ಯ, ಶೇಖ್ ಫರೀದ್, ಹಸೇನ್ ಹಾಶ್ಮಿ, ಅಬ್ದುಲ್ ಹಮೀದ್ ಹಾಫೀಜ್, ಅನೀಲಕುಮಾರ ಹುಡದಳ್ಳಿ, ಆನಂದ ಜಾಧವ, ತುಕ್ಕರಾಮ ಪವ್ಹಾರ, ಗೋವಿಂದ ರಾಠೋಡ, ವೀರಶೇಟ್ಟಿ ಪಾಟೀಲ, ಹಣಮಂತ, ಜನಾರ್ಧನ, ಅನೇಕರಿದ್ದರು.



☛ ಉದಯವಾಹಿನಿ ಚಿತ್ರ

ಪ್ರಿಯಾಂಕ್ ಖರ್ಗೆ ಹುಟ್ಟುಹಬ್ಬ

## ಬೇಡ್ ಶೀಡ್ ವಿತರಣೆ

ಆರ್‌ಡಿಪಿಆರ್ ಐಟಿಬಿಟಿ ಸಚಿವ ಪ್ರೀಯಾಂಕ್ ಖರ್ಗೆಯವರ 47ನೇ ಹುಟ್ಟುಹಬ್ಬದ ಅಂಗವಾಗಿ ಪುರಸಭೆ ಅಧ್ಯಕ್ಷ ಆನಂದ ಟೈಗರ್ ವೈಯಕ್ತಿಕವಾಗಿ 47ಜನ ಪೌರ ಕಾರ್ಮಿಕರಿಗೆ ಚಳಿಗಾಲ ಕಾರಣ ಗರಂ ಹಚ್ಚಿಕೊಳ್ಳಲು ಬೇಡ್ ಶೀಡ್ ವಿತರಿಸಿದರು.


☛ ಉದಯವಾಹಿನಿ ಚಿತ್ರ


☛ ಉದಯವಾಹಿನಿ ಚಿತ್ರ

## ಉಚಿತ ಆರೋಗ್ಯ ತಪಾಸಣೆ

ಸಚಿವ ಪ್ರೀಯಾಂಕ್ ಖರ್ಗೆ ಹುಟ್ಟುಹಬ್ಬದ ಅಂಗವಾಗಿ ಹಮ್ಮಿಕೊಂಡ ಉಚಿತ ಆರೋಗ್ಯ ತಪಾಸಣೆಯಲ್ಲಿ 82 ಜನರು ತಪಾಸಣೆ ಮಾಡಿಕೊಂಡರೆ, ನೇತ್ರ ತಪಾಸಣೆ 125 ಜನರು ಮಾಡಿಕೊಂಡರೆ ಅದರಲ್ಲಿ 13ಜನರಿಗೆ ಉಚಿತ ನೇತ್ರ ಚಿಕಿತ್ಸೆ ಮಾಡಲಾಗುತ್ತಿದ್ದು ಜನರು ಇದರ ಸದುಪಯೋಗ ಪಡೆದುಕೊಂಡಿದ್ದಾರೆ.

# ಗೋವಿನ ಜೋಳ ಖರೀದಿ ಕೇಂದ್ರ ಆರಂಭಿಸಲು ಆಗ್ರಹ

• ಉದಯವಾಹಿನಿ, ಸವದತ್ತಿ

ಗೋವಿನ ಜೋಳ ಖರೀದಿ ಕೇಂದ್ರ ಆರಂಭಿಸಬೇಕು ಎಂದು ಆಗ್ರಹಿಸಿ ಇಲ್ಲಿನ ಕರ್ನಾಟಕ ಪ್ರಾಂತ ರೈತ ಸಂಘದ ಸದಸ್ಯರು ತಾಲ್ಲೂಕು ಆಡಳಿತ ಸೌಧದ ಎದುರು ಪ್ರತಿಭಟನೆ ನಡೆಸಿ ಗ್ರೇಡ್ 2 ತಹಶೀಲ್ದಾರ್ ಎಂ.ಎನ್. ಮಠದ ಅವರಿಗೆ ಮನವಿ ಸಲ್ಲಿಸಿದರು.

ರೈತ ಪ್ರಮುಖ ಫಕ್ರಸಾಬ ನದಾಫ ಮಾತನಾಡಿ, ಗೋವಿನ ಜೋಳ ಖರೀದಿಯಲ್ಲಿ ತಾರತಮ್ಯ ನಡೆದಿರುವ ಕಾರಣ ಸರ್ಕಾರ ಕೂಡಲೇ ರೈತರ ನೆರವಿಗೆ ಧಾವಿಸಬೇಕಿದೆ. ಶೀಘ್ರವಾಗಿ ಗೋವಿನ ಜೋಳ ಖರೀದಿ ಕೇಂದ್ರ ಆರಂಭಿಸಬೇಕು. ತಾಲ್ಲೂಕಿನಾದ್ಯಂತ 11 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಗೋವಿನಜೋಳ ಬೆಳೆಯಲಾಗಿದೆ. ಕೇಂದ್ರ ಸರ್ಕಾರ ಬೆಂಬಲ ಬೆಲೆಯಾಗಿ ರೂ. 2,410 ನ್ನು ನೀಡಿದರೂ ಮಾರುಕಟ್ಟೆಯಲ್ಲಿ ಕೇವಲ ರೂ. 1,700ಕ್ಕೆ ಮಾತ್ರ ಖರೀದಿಸುತ್ತಿದ್ದಾರೆ. ಗೋವಿನ ಜೋಳದ ಬೀಜ 5 ಕೆ.ಜಿ. ಗೆ ರೂ. 2,500 ದರವಿದ್ದು ರೈತರಿಗೆ ನ್ಯಾಯಸಮ್ಮತ ಬೆಲೆ ಸಿಗುತ್ತಿಲ್ಲ. ಹೆಸರು ಬೆಳೆಯ ಸಂಕಷ್ಟ ಹೇಳತೀರದಷ್ಟಿದೆ.



☛ ಉದಯವಾಹಿನಿ ಚಿತ್ರ

ಅದಕ್ಕೂ ನ್ಯಾಯಸಮ್ಮತ ಬೆಲೆಯನ್ನು ರೈತ ಪಡೆಯಲಿಲ್ಲ. ರೈತರ ಒತ್ತಾಸೆಯಂತೆ ಖರೀದಿ ಕೇಂದ್ರ ಆರಂಭಿಸುವುದಾಗಿ ಸರಕಾರ ಭರವಸೆ ನೀಡಿತು. ನೋಂದಣಿ ಪ್ರಕ್ರಿಯೆಯೂ ನಡೆಯಿತು. ಆದರೆ ಇಲ್ಲಿಯವರೆಗೂ ರೈತರಿಂದ ಸರ್ಕಾರ ಹೆಸರು ಖರೀದಿ ಮಾಡಲು ಮುಂದೆ ಬಂದಿಲ್ಲ' ಎಂದು ದೂರಿದರು. ಹೆಸರು ಬೆಳೆ ಮತ್ತು ಗೋವಿನ ಜೋಳ ಖರೀದಿಸದ ಸರ್ಕಾರಕ್ಕೆ ಧಿಕ್ಕಾರ ಎಂಬ ಘೋಷಣೆ ಕೂಗಿದರು. ಶ್ರೀಕಾಂತ ಹಟ್ಟಿಹೊಳಿ, ಬಸವರಾಜ ಕಪ್ಪನ್ನವರ, ನಾಗಪ್ಪ ಪ್ರಭುನವರ, ಶಂಕರ ಬೆಡಸೂರ, ಮೌನೇಶ ನಾಯ್ಕರ ಹಾಜರಿದ್ದರು.

'ಜೆಪಿಎಸ್ ಮಾಡಿದವರ ಹೆಸರಿನ ಮಾತ್ರ ಖರೀದಿ ನಡೆದಿದೆ. 1 ಎಕರೆಗೆ 3 ಕ್ವಿಂಟಲ್ ಖರೀದಿಸುವುದಿದ್ದರೂ ಹೆಚ್ಚಿನ ಜಮೀನಿದ್ದ ರೈತರ ಬೆಳೆ ಖರೀದಿಸಿಲ್ಲ. ಒಳ್ಳೆಯ ಕಾಳು ತೋರಿಸಿದರೂ ಡ್ಯಾಮೇಜ್ ಇದೆ ಎನ್ನುವ ಮೂಲಕ ಕಡಿಮೆ ದರ ನಿಗದಿ ಮಾಡುತ್ತಿದ್ದಾರೆ. ಈ ಎಲ್ಲಾ ಸಮಸ್ಯೆಗಳನ್ನು ತಹಶೀಲ್ದಾರರು ಗಮನಿಸಿ ರೈತರಿಗೆ ಅನುಕೂಲ ಕಲ್ಪಿಸಬೇಕು' ಎಂದು ಒತ್ತಾಯಿಸಿದರು. ರೈತರು ಬೀದಿಗಿಳಿದು ತೀವ್ರ ಹೋರಾಟ ನಡೆಸುವ ಮುನ್ನವೇ ಸರ್ಕಾರ ಎಚ್ಚೆತ್ತು ರೈತರಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.
-ಈರಪ್ಪ ಪಾಟೀಲ, ರೈತ

# ಕನ್ನಡ ಸಂಸ್ಕೃತಿ ವಿಶ್ವಕ್ಕೆ ಮಾದರಿ: ಜಿನದತ್ತ ಹಡಗಲಿ

• ಉದಯವಾಹಿನಿ ನರಗುಂದ

'ಕನ್ನಡ ನಾಡು, ನುಡಿ ವಿಶೇಷವಾದದ್ದು. ಆದರೆ, ಕನ್ನಡ ಭಾಷೆಗೆ ಸಂಕಷ್ಟ ಎದುರಾಗಿದ್ದು, ಕನ್ನಡಿಗರು ಸ್ವಾಭಿಮಾನಿಗಳಾಗಿ ಕನ್ನಡ ಬೆಳೆಸಬೇಕು' ಎಂದು ಧಾರವಾಡದ ಜೆಎಸ್‌ಎಸ್ ಡಿ. ವೀರೇಂದ್ರ ಹೆಗ್ಗಡೆ ಸಂಶೋಧನಾ ಕೇಂದ್ರದ ಸಂಯೋಜಕ, ಸಾಹಿತಿ ಜಿನದತ್ತ ಹಡಗಲಿ ಹೇಳಿದರು.

ಪಟ್ಟಣದ ಸಿದ್ದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕರ ಪರಿಷತ್ ಆಶ್ರಯದಲ್ಲಿ ನಡೆದ ಕನ್ನಡ-ಕನ್ನಡಿಗ-ಕರ್ನಾಟಕ, ನಾಡು-ನುಡಿ ಜಾಗೃತಿ ಗೀತ ಗಾಯನ ಹಾಗೂ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕನ್ನಡಿಗರೇ ಕನ್ನಡದಲ್ಲಿ ಮಾತನಾಡಲು ಹಿಂದೇಟು ಹಾಕುವುದು ತರವಲ್ಲ. ಕನ್ನಡ ಭಾಷೆಗೆ 2,500 ವರ್ಷಗಳ ಇತಿಹಾಸವಿದ್ದು, ಅತ್ಯಂತ ಶ್ರೀಮಂತ ಭಾಷೆಯಾಗಿದೆ. ತನ್ನದೇ ಆದ ಸಾಹಿತ್ಯ, ಸಂಸ್ಕೃತಿ ಮೂಲಕ ವಿಶ್ವಕ್ಕೆ ಮಾದರಿಯಾಗಿದೆ' ಎಂದರು. ಕನ್ನಡ ಸಂಸ್ಕೃತಿಯನ್ನು ವಿದೇಶದಲ್ಲಿ ಪಸರಿಸಲಾಗುತ್ತಿದೆ. ಹಾಗಾಗಿ, ಕನ್ನಡ ನೆಲದಲ್ಲಿ ನಮ್ಮ ಭಾಷೆಯನ್ನು ಬೆಳೆಸುವ ಜವಾಬ್ದಾರಿ ನಮ್ಮದಾಗಿದೆ. ವಿದ್ಯಾರ್ಥಿಗಳು ಅನ್ಯ ಭಾಷೆಗೆ ಮಾರುಹೋಗದೆ, ಮಾತೃಭಾಷೆ ಪ್ರೇಮ ಬೆಳೆಸಿಕೊಳ್ಳಬೇಕು. ಕನ್ನಡ ಸಾಹಿತ್ಯ ಅಧ್ಯಯನ ಮಾಡಬೇಕು ಎಂದು ಸಲಹೆ ನೀಡಿದರು.


☛ ಉದಯವಾಹಿನಿ ಚಿತ್ರ

# ಅಲೆಮಾರಿ ಜನಾಂಗ ಸೌಲಭ್ಯಗಳಿಂದ ವಂಚಿತ

• ಉದಯವಾಹಿನಿ ಶಿವಪುರ

ದೇಶಕ್ಕೆ ಸ್ವಾತಂತ್ರ್ಯ ದೊರಕಿ ಅನೇಕ ದಶಕಗಳು ಕಳೆದರೂ ಬುಡಕಟ್ಟು ಮತ್ತು ಅಲೆಮಾರಿ ಜನಾಂಗವು ಸೌಲಭ್ಯದಿಂದ ವಂಚಿತರಾಗಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯೇ ಕಾರಣವಾಗಿದೆ' ಎಂದು ರಾಜ್ಯ ಎಸ್.ಸಿ/ಎಸ್.ಟಿ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಜಿ. ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ತಾಲ್ಲೂಕಿನ ಶಿವಪುರ ಗ್ರಾಮದಲ್ಲಿ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯ್ತಿ ಮತ್ತು ಸಮಾಜ ಕಲ್ಯಾಣ ಇಲಾಖೆಯ ಆಶ್ರಯದಲ್ಲಿ ನಡೆದ ಅಲೆಮಾರಿ ಸಮುದಾಯದ ಕುಂದುಕೊರತೆ ಸಮಾರಂಭವನ್ನು ಅವರು ಉದ್ಘಾಟಿಸಿ ಜನರ ಸಮಸ್ಯೆಗಳನ್ನು ಆಲಿಸಿದರು. ಅಲೆಮಾರಿ ಜನಾಂಗದ ಸಮಸ್ಯೆ ಕುರಿತು ಅಧಿಕಾರಿಗಳನ್ನು ಪ್ರಶ್ನಿಸಿದಾಗ ಅಧಿಕಾರಿಗಳು ಉತ್ತರ ಹೇಳಲು ತಡವರಿಸಿದರು. ಗ್ರಾಮದ ಜನಾಂಗಕ್ಕೆ ಸರ್ಕಾರದ ಯೋಜನೆಗಳನ್ನು ಏನನ್ನು ಕೊಟ್ಟಿರುವಿರಿ ಎಂದಾಗ ಅಧಿಕಾರಿಗಳು ಮೌನಕ್ಕೆ ಜಾರಿದರು. ಶಿವಪುರ ಗ್ರಾಮದ ಅಲೆಮಾರಿ ಜನಾಂಗವು ಶಿಕ್ಷಣ, ಉದ್ಯೋಗ, ಆರೋಗ್ಯದ ಸೌಲಭ್ಯಗಳು ಸಿಕ್ಕಿಲ್ಲ. ಶೌಚಾಲಯಗಳ ಕೊರತೆ ಸಮಸ್ಯೆಗಳನ್ನು ಹೊಂದಿದ್ದಾರೆ ಹೆಚ್ಚಿನ ಕಾಳಜೀ ವಹಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಅಧಿಕಾರಿಗಳಿಗೆ ತರಾಟೆ

ಅಲೆಮಾರಿ ಮತ್ತು ಬುಡಕಟ್ಟು ಜನಾಂಗದವರ ನೈಜ ಪರಿಸ್ಥಿತಿ ಅರಿಯಲು ಭೇಟಿ ನೀಡಲಾಗಿದೆ. ನಿಮ್ಮ ಸಮಸ್ಯೆಗಳು ನಿವಾರಣೆಯಾಗುವವರೆಗೆ ಹೋರಾಟ ಮಾಡಿ ನಾವು ನಿಮ್ಮ ಜೊತೆಗೆ ಇದ್ದೇವೆ' ಎಂದು ನಿಗಮದ ಕಾರ್ಯದರ್ಶಿ ಕಿರಣ ಏಕಲವ್ಯ ತಿಳಿಸಿದರು. ಎಸ್.ಸಿ/ಎಸ್.ಟಿ ಅಲೆಮಾರಿ ಸಮುದಾಯ ಸಮಸ್ಯೆಗಳನ್ನು ಬಗೆಹರಿಸಲು ರಾಜ್ಯ ಸರ್ಕಾರದ ಅನೇಕ ಯೋಜನೆಗಳಿವೆ. ಗ್ರಾಮ ಸಭೆ ನಡೆಸುವುದಾಗಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಎಂ.ಎಂ. ಮಳಿಮಠ ಹೇಳಿದರು.


☛ ಉದಯವಾಹಿನಿ ಚಿತ್ರ

# ನೂರು ಬಾಲಕಿಯರಿಗೆ 3 ಶೌಚಾಲಯ: ಗೋಳು ಕೇಳೋರಿಲ್ಲ

• ಉದಯವಾಹಿನಿ ಹುನಗುಂದ

ಮೂರು ಕೊಠಡಿಗಳಲ್ಲಿ ನೂರು ಬಾಲಕಿಯರ ವಾಸ, ಒಂದು ಕೊಠಡಿಯಲ್ಲಿ ಮಾತ್ರ ಸ್ನಾನ ಗೃಹ, ಮೂರು ಶೌಚಾಲಯಗಳು ಇವುಗಳಲ್ಲಿಯೇ ನಿತ್ಯ ಕರ್ಮಗಳನ್ನು ಮುಗಿಸಬೇಕಾದ ಶೋಚನೀಯ ಸ್ಥಿತಿ.

ತಾಲ್ಲೂಕಿನ ನಾಗೂರ ಗ್ರಾಮದಲ್ಲಿ 6 ರಿಂದ 10ನೇ ತರಗತಿ 100 ವಿದ್ಯಾರ್ಥಿನಿಯರ ಕರ್ನಾಟಕ ಕಸ್ತೂರಿ ಬಾ ಗಾಂಧಿ ವಸತಿ ಶಾಲೆಯ ಸ್ಥಿತಿ ಇದು. ಕಳೆದ 14 ವರ್ಷಗಳಿಂದಲೂ ಈ ದುಸ್ಥಿತಿ ಮುಂದುವರೆದಿದೆ.

2011 ರಲ್ಲಿ ಗ್ರಾಮದ ಎಂಪಿಎಸ್ ಶಾಲೆಯಲ್ಲಿ ವಸತಿ ನಿಲಯ ಆರಂಭವಾಯಿತು. ನಂತರ 2017 ರಿಂದ ಗ್ರಾಮದಲ್ಲಿ ಖಾಲಿಯಿದ್ದ ಸರ್ಕಾರಿ ಹೆಣ್ಣು ಮಕ್ಕಳ ಶಾಲೆಯಲ್ಲಿ ವಸತಿ ನಿಲಯ ಮುಂದುವರೆದಿದೆ. ಆದರೆ ಈವರೆಗೂ ಸ್ವಂತ ಕಟ್ಟಡ ಹೊಂದಿಲ್ಲ.

ಬಾಲಕಿಯರು ಮಲಗಲು ಇರುವುದು ಮೂರು ಕೊಠಡಿಗಳು ಮಾತ್ರ. ಅವುಗಳಲ್ಲಿ ಒಂದೊಂದು ಕೊಠಡಿಯಲ್ಲಿ 30 ರಿಂದ 35 ಬಾಲಕಿಯರು ನೆಲದ ಹಾಸಿನಲ್ಲಿ ಮಲಗಬೇಕಾಗಿದೆ. ಅದು ಇಕ್ಕಟ್ಟಾದ ಜಾಗ, ಕೊಠಡಿ ಒಳಭಾಗದ ಸುತ್ತಲೂ ಟ್ರಂಕ್‌ಗಳನ್ನ ಇಡಲಾಗಿದೆ. ಅಲ್ಲಿಯೇ ಬಟ್ಟೆಗಳನ್ನು ಇಡಲಾಗಿದೆ. ಪ್ರತಿ ಕೊಠಡಿಯ ಮೂಲೆಯಲ್ಲಿ ಬಾಲಕಿಯರಿಗೆ ಮೀಸಲಾಗಿರುವ ಬೆಡ್‌ಶೀಟ್‌ಗಳಿದ್ದು, ಒಂದರ ಮೇಲೊಂದು ಜೋಡಿಸಿ ಇಡಲಾಗಿದೆ.

ಬೆಡ್‌ಶೀಟ್‌ಗಳನ್ನು ಹಾಸಿದರೆ ಎಲ್ಲರಿಗೂ ಮಲಗಲು ಜಾಗದ ಕೊರತೆ ಎದುರಾಗುತ್ತದೆ. ಹೀಗಾಗಿ ಬೆಡ್‌ಶೀಟ್‌ಗಳು ಇದ್ದೂ ಇಲ್ಲದಂತಾಗಿವೆ. ಸಾಲಾಗಿ ಹೊಂದಿಕೊಂಡು ಮಲಗಿದರೂ ಜಾಗ ಸಾಕಾಗುವುದಿಲ್ಲ. ಹೀಗಾಗಿ ಬಾಲಕಿಯರಿಗೆ ನಿತ್ಯ ನರಕಯಾತನೆ ಅನುಭವಿಸುವುದು ಮಾತ್ರ ತಪ್ಪಿಲ್ಲ.

**ಶೌಚಾಲಯಕ್ಕೆ ಬಯಲೇ ಗತಿ:** ವಸತಿ ನಿಲಯದಲ್ಲಿರುವ ನೂರು ಬಾಲಕಿಯರಿಗೆ ಹಾಗೂ ಸಿಬ್ಬಂದಿ ಬಳಕೆಗೆ ಕೇವಲ ಮೂರು ಶೌಚಾಲಯ ಮಾತ್ರ ಇವೆ. ಹೀಗಾಗಿ ವಿಧಿಯಿಲ್ಲದೆ ಬಾಲಕಿಯರು ಬಯಲು ಬಹಿರ್ದೆಸೆಗೆ ಹೋಗಬೇಕಾದ ದುಸ್ಥಿತಿ ಬಂದೊದಗಿದೆ.

ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಬಾಲಕಿಯರ ಗೋಳು ಕೇಳೋರು ಯಾರೂ ಇಲ್ಲದಂತಾಗಿದೆ. ವಸತಿ ನಿಲಯಕ್ಕೆ ಸ್ವಂತ ಕಟ್ಟಡ ಹೊಂದಲು ಸಾಧ್ಯವಾಗಿಲ್ಲ ಜೊತೆಗೆ ಕನಿಷ್ಠ ಮೂಲ ಸೌಕರ್ಯಗಳನ್ನು ಕಲ್ಪಿಸಲು ಸಾಧ್ಯವಾಗಿಲ್ಲ. ಈ ಬಗ್ಗೆ ಮಾಹಿತಿ ಪಡೆಯಲು ಕ್ಷೇತ್ರ ಶಿಕ್ಷಣಾಧಿಕಾರಿ ಅವರನ್ನು ಸಂಪರ್ಕಿಸಿದರೆ ಅವರು ಕರೆ ಸ್ವೀಕರಿಸಲಿಲ್ಲ.


☛ ಉದಯವಾಹಿನಿ ಚಿತ್ರ

## ಒಂದು ಸ್ನಾನ ಗೃಹ

ವಸತಿ ನಿಲಯದಲ್ಲಿರುವ ನೂರು ಬಾಲಕಿಯರಿಗೆ ಒಂದೇ ಒಂದು ಸ್ನಾನ ಗೃಹ ಇದೆ. ಅದರೊಂದಿಗೆ ಶೌಚಾಲಯದ ಮುಂಭಾಗವಿರುವ ಖಾಲಿ ಜಾಗದಲ್ಲಿ ಸ್ನಾನ ಮಾಡಬೇಕಾಗಿದೆ. ಹೀಗಾಗಿ ಬಾಲಕಿಯರು ನಸುಕಿನ ಜಾವ ಬೇಗ ಎದ್ದು ನಾ ಮುಂದು ತಾ ಮುಂದು ಎಂದು ಸ್ನಾನ ಮಾಡಬೇಕಾದ ದಯನೀಯ ಸ್ಥಿತಿ ಇಲ್ಲಿದೆ.

# ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ: ಶಶಿಧರ ಕುರೇರ

• ಉದಯವಾಹಿನಿ ಬಾಗಲಕೋಟೆ

ವಿವಿಧ ಯೋಜನೆಗಳಡಿ ಕೈಗೊಂಡ ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವುದರ ಜೊತೆಗೆ ಗುಣಮಟ್ಟಕ್ಕೆ ಆದ್ಯತೆ ನೀಡಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಅಧಿಕಾರಿ ಶಶಿಧರ ಕುರೇರ, ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಸಭಾಭವನದಲ್ಲಿ ಜರುಗಿದ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಪಾತ್ರ ಮಹತ್ವದ್ದಾಗಿದ್ದು, ಜವಾಬ್ದಾರಿ ಅರಿತು ಕೆಲಸ ನಿರ್ವಹಿಸಬೇಕು ಎಂದರು.

ಗ್ರಾಮೀಣ ಭಾಗದ ಅಭಿವೃದ್ಧಿ ಚಟುವಟಿಕೆಗಳಿಗೆ ನರೇಗಾ ಸಹಕಾರಿಯಾಗಿದ್ದು, ಈ ಯೋಜನೆಯಡಿ ಕೈಗೊಂಡ ಕಾಮಗಾರಿಗಳನ್ನು ಅರ್ಧಕ್ಕೆ ನಿಲ್ಲಿಸಬಾರದು.

ಗುಣಮಟ್ಟ ಕಾಯ್ದುಕೊಳ್ಳುವುದರ ಜೊತೆಗೆ ಪೂರ್ಣಗೊಳಿಸುವ ನಿಟ್ಟಿನಲ್ಲಿ ಹೆಚ್ಚಿನ ಮುತುವರ್ಜಿವಹಿಸಿ ಕೆಲಸ ಮಾಡಬೇಕು. ಬಾಕಿ ಉಳಿದಿರುವ ಸಿವಿಲ್ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಿದರು. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರ ವಸೂಲಾತಿಯಲ್ಲಿ ಶೇ3 ರಷ್ಟು ಬಿಕ್ಷುಕರ ವಂತಿಗೆ ಮೊತ್ತವನ್ನು ಕೇಂದ್ರ ಪರಿಹಾರ ಸಮಿತಿಗೆ ಪಾವತಿಸುವಲ್ಲಿ ಗ್ರಾಮ ಪಂಚಾಯತಿಗಳು ಬಾಕಿ ಉಳಿಸಿಕೊಂಡಿವೆ. ವಂತಿಗೆ ಮೊತ್ತ ಪಾವತಿಗೆ ಕ್ರಮವಹಿಸಲು ಕ್ರಮ ವಹಿಸಬೇಕು. ವಸತಿ ಯೋಜನೆಯಡಿ ಗುರಿಗೆ ತಕ್ಕಂತೆ ಫಲಾನುಭವಿಗಳ ಆಯ್ಕೆ ಮಾಡಬೇಕು ಎಂದರು.

ಗ್ರಾಮ ಪಂಚಾಯಿತಿ ಸಿಬ್ಬಂದಿ, ಗ್ರಂಥಾಲಯ ಮೇಲ್ವಿಚಾರಕರ ವೇತನ ಪಾವತಿ ಸಕಾಲಕ್ಕೆ ಆಗಬೇಕು. ಜೊತೆಗೆ ವಾಹನ ಚಾಲಕರ ಮತ್ತು ಸ್ವಚ್ಛತಾಗಾರರ ಗೌರವಧನ ಪಾವತಿಗೆ ಕ್ರಮವಹಿಸಬೇಕು.

ಗ್ರಾಮ ಪಂಚಾಯಿತಿ ಕಡ್ಡಾಯವಾಗಿ ಬಯೋಮೆಟ್ರಿಕ್ ಹಾಜರಾತಿ ಹಾಕಬೇಕು. ಮಕ್ಕಳ ಗ್ರಾಮ ಸಭೆ ಹಾಗೂ ಸಾಮಾನ್ಯ ಸಭೆ ಜರುಗಿಸಿದ ಕುರಿತು ಮಾಹಿತಿ ಪಡೆದುಕೊಂಡರು.


☛ ಉದಯವಾಹಿನಿ ಚಿತ್ರ

ಜಲ ಜೀವನ ಮಿಷನ್ ಯೋಜನೆಯಡಿ ಏಕ, ಬಹು ಗ್ರಾಮ ಕುಡಿಯುವ ನೀರಿನ ಯೋಜನೆ, ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆ, ತಾಲ್ಲೂಕು ಟಾಸ್ಕ್ ಫೋರ್ಸ್ ಸಮಿತಿ ಬಗ್ಗೆ ಚರ್ಚಿಸಲಾಯಿತು. ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ವೈಯಕ್ತಿಕ ಹಾಗೂ ಸಮುದಾಯ ಶೌಚಾಲಯ ನಿರ್ಮಾಣವಾಗಬೇಕು. ದೂರು ಅರ್ಜಿಗಳನ್ನು ವಿಲೇವಾರಿ ಮಾಡಬೇಕು.
-ಶಶಿಧರ ಕುರೇರ

# ಗೇಟ್ ಅಳವಡಿಕೆ ವಿಳಂಬ: ರೈತರ ಆತಂಕ

• ಉದಯವಾಹಿನಿ ಶಿರಸಿ

ರೈತರ ಜೀವನಾಡಿ ವರದಾ, ಶಾಲ್ಮಲಾ ನದಿ ಸೇರಿ ವಿವಿಧ ಜಲಮೂಲಗಳಲ್ಲಿ ದಿನದಿಂದ ದಿನಕ್ಕೆ ನೀರಿನ ಪ್ರಮಾಣ ಕಡಿಮೆಯಾಗುತ್ತಿದ್ದು, ಬಾಂದಾರ (ಬ್ಯಾರೇಜ್) ಗೇಟ್ ಅಳವಡಿಸಲು ಅಧಿಕಾರಿಗಳು ವಿಳಂಬ ಧೋರಣೆ ತೋರುತ್ತಿರುವುದು ರೈತರಲ್ಲಿ ಆತಂಕ ಸೃಷ್ಟಿಸಿದೆ.

ಶಿರಸಿ, ಸಿದ್ದಾಪುರ ತಾಲ್ಲೂಕುಗಳಲ್ಲಿ 150ಕ್ಕೂ ಹೆಚ್ಚು ಬ್ಯಾರೇಜ್‌ಗಳಿವೆ. ಅವುಗಳಲ್ಲಿ 20ಕ್ಕೂ ಹೆಚ್ಚು ದೊಡ್ಡಮಟ್ಟದ ಬ್ಯಾರೇಜ್‌ಗಳು ರೈತರ ನೀರಿನ ಮೂಲವಾಗಿವೆ. ಶಿರಸಿ ತಾಲ್ಲೂಕಿನ ತಿಗಣಿ ಬ್ಯಾರೇಜ್ ಅರ್ಧ ಭಾಗದಲ್ಲಿ ಗೇಟ್ ಅಳವಡಿಕೆಯಾಗಿದ್ದು ಹೊರತುಪಡಿಸಿ, ಉಳಿದೆಲ್ಲೆಡೆ ಗೇಟ್ ಅಳವಡಿಕೆ ಕಾರ್ಯ ಇನ್ನೂ ಆರಂಭವಾಗಿಲ್ಲ. ಮಳೆ ಮುಗಿದು ಹಲವು ದಿನಗಳು ಕಳೆದು, ಜಲಮೂಲಗಳ ನೀರಿನ ಹರಿವಿನ ಪ್ರಮಾಣ ತಗ್ಗುತ್ತಿದ್ದರೂ ಗೇಟ್ ಅಳವಡಿಸದ ಬಗ್ಗೆ ರೈತರು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ನೀರಾವರಿ ಆಶ್ರಿತ ಪ್ರದೇಶವಾದ ಬನವಾಸಿ ಹೋಬಳಿಯ ರೈತರಿಗೆ ವರವಾಗಿರುವ ವರದಾ ನದಿಯಲ್ಲಿ ನೀರಿನ ಪ್ರಮಾಣ ಇಳಿಮುಖವಾಗುತ್ತಿದೆ. ಬೇಸಿಗೆಯಲ್ಲಿ ಕುಡಿಯುವ ನೀರಿಗೆ, ರೈತರ ಬೆಳೆಗಳಿಗೆ ನೀರು ಹಾಯಿಸಲು ಅನುಕೂಲವಾಗುವ ದೃಷ್ಟಿಯಿಂದ ವರದಾ ನದಿಗೆ ಭಾಶಿ, ಮೊಗವಳ್ಳಿ ಹಾಗೂ ತಿಗಣಿಯಲ್ಲಿ ಬ್ಯಾರೇಜ್ ನಿರ್ಮಿಸಲಾಗಿದೆ. ಆದರೆ, ಈಗ ನದಿಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿ ವ್ಯರ್ಥವಾಗಿ ಹರಿದು ಹೋಗುತ್ತಿದೆ. ಆದರೂ ಅಧಿಕಾರಿಗಳು ಗೇಟ್ ಅಳವಡಿಸಲು ಮುಂದಾಗದಿರುವುದು ಬನವಾಸಿ ಸೇರಿದಂತೆ ಸುತ್ತಮುತ್ತಲ ಕೃಷಿಕರನ್ನು ಸಂಕಷ್ಟಕ್ಕೆ ಸಿಲುಕುವಂತೆ ಮಾಡಿದೆ ಎಂಬುದು ರೈತರ ದೂರಾಗಿದೆ.


☛ ಉದಯವಾಹಿನಿ ಚಿತ್ರ

## ಮಿನಿ ನ್ಯೂಸ್

### ಹಾಸ್ಟೆಲ್ ಅವ್ಯವಸ್ಥೆ: ಲೋಕಾಯುಕ್ತ ಕಚೇರಿವರೆಗೆ ವಿದ್ಯಾರ್ಥಿಗಳ ಮೆರವಣಿಗೆ

• ಉದಯವಾಹಿನಿ ಹಾವೇರಿ

ಇಲ್ಲಿಯ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳಲ್ಲಿ ಅವ್ಯವಸ್ಥೆ ಹೆಚ್ಚಾಗಿದ್ದು, ವಿದ್ಯಾರ್ಥಿಗಳು ನಿತ್ಯವೂ ನರಕಯಾತನೆ ಅನುಭವಿಸುತ್ತಿದ್ದಾರೆ ಎಂದು ಆರೋಪಿಸಿ ಹಾಸ್ಟೆಲ್ ವಿದ್ಯಾರ್ಥಿಗಳು ದಿಢೀರ್ ಪ್ರತಿಭಟನೆ ನಡೆಸಿದರು. ನಗರದ ಹಳೇ ಪಿ.ಬಿ.ರಸ್ತೆ ಬಳಿ ಇರುವ ಹಾಸ್ಟೆಲ್ ಎದುರು ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು, ಅಲ್ಲಿಂದ ವಾಲ್ಮೀಕಿ ವೃತ್ತದಲ್ಲಿರುವ ಲೋಕಾಯುಕ್ತ ಕಚೇರಿಯವರೆಗೂ ಮೆರವಣಿಗೆ ನಡೆಸಿದರು.

ಎಸ್‌ಎಫ್‌ಐ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ಸೌಲಭ್ಯ ಸಿಗುತ್ತಿಲ್ಲ. ಹೊಸ ಬೆಡ್‌ಗಳು, ಬಕೆಟ್‌ಗಳು ಹಾಗೂ ಇತರೆ ಸಾಮಗ್ರಿಗಳು ಬಂದು ನಾಲ್ಕು ತಿಂಗಳಾಗಿದೆ. ಅದನ್ನು ಇದುವರೆಗೂ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಿಲ್ಲ. ಹಾಸ್ಟೆಲ್‌ನಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳಿಲ್ಲ. ಗ್ರಂಥಾಲಯ ಕಂಪ್ಯೂಟರ್ ಕಚೇರಿಗೂ ಬೀಗ ಹಾಕಲಾಗಿದೆ.

ವಿದ್ಯಾರ್ಥಿಗಳ ಬಳಕೆಗೆ ನೀಡಲು ಹಿಂದೇಟು ಹಾಕುತ್ತಿದ್ದಾರೆ ಎಂದು ವಿದ್ಯಾರ್ಥಿಗಳು ದೂರಿದರು. ಹಾಸ್ಟೆಲ್‌ನಲ್ಲಿರುವ ಅವ್ಯವಸ್ಥೆಯನ್ನು ಸರಿಪಡಿಸಬೇಕು. ವಿದ್ಯಾರ್ಥಿಗಳಿಗೆ ಬಂದಿರುವ ಎಲ್ಲಾ ವಸ್ತುಗಳನ್ನು ತ್ವರಿತವಾಗಿ ವಿತರಿಸಬೇಕು. ಕಂಪ್ಯೂಟರ್ ಹಾಗೂ ಗ್ರಂಥಾಲಯದ ಕೊಠಡಿಗೆ ಹಾಕಿರುವ ಬೀಗವನ್ನು ತೆರೆದು ವಿದ್ಯಾರ್ಥಿಗಳ ಬಳಕೆಗೆ ನೀಡಬೇಕು ಎಂದು ಒತ್ತಾಯಿಸಿದರು.

### ಅಧಿವೇಶನದ ವೇಳೆ ಬೃಹತ್ ಪ್ರತಿಭಟನೆ

• ಉದಯವಾಹಿನಿ ಬೆಳಗಾವಿ

ಕಾರ್ಯದರ್ಶಿಮಟ್ಟದ ಕಚೇರಿಗಳನ್ನು ಸ್ಥಳಾಂತರಿಸಿ ಸುವರ್ಣ ವಿಧಾನಸೌಧವನ್ನು ಆಡಳಿತ ಶಕ್ತಿಕೇಂದ್ರವಾಗಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ, ವಿಧಾನಮಂಡಲ ಚಳಿಗಾಲದ ಅಧಿವೇಶನದ ವೇಳೆ ಬೃಹತ್ ಪ್ರತಿಭಟನೆ ನಡೆಸಲಾಗುವುದು' ಎಂದು ಉತ್ತರ ಕರ್ನಾಟಕ ವಿಕಾಸ ವೇದಿಕೆ ಅಧ್ಯಕ್ಷ ಅಶೋಕ ಪೂಜಾರಿ ಹೇಳಿದರು. ಉತ್ತರ ಕರ್ನಾಟಕ ವಿಕಾಸ ವೇದಿಕೆ, ಉತ್ತರ ಕರ್ನಾಟಕ ಹೋರಾಟ ಸಮಿತಿ ಹಾಗೂ ಉತ್ತರ ಕರ್ನಾಟಕ ಪರ ಇರುವ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಹೋರಾಟ ನಡೆಯಲಿದೆ. ವಿವಿಧ ಸಂಘಟನೆಗಳೊಂದಿಗೆ ಚರ್ಚಿಸಿ, ಶೀಘ್ರವೇ ಹೋರಾಟದ ದಿನಾಂಕ ನಿಗದಿಪಡಿಸಲಾಗುವುದು ಎಂದರು. ನಾವು ಪ್ರತ್ಯೇಕ ರಾಜ್ಯಕ್ಕಾಗಿಯೇ ಹೋರಾಟ ಮಾಡುತ್ತಿಲ್ಲ. ಆದರೆ, ನಿರಂತರವಾಗಿ ಹೋರಾಟ ನಡೆಸಿದರೂ ಉತ್ತರ ಕರ್ನಾಟಕದ ಬೇಡಿಕೆಗಳಿಗೆ ಸರ್ಕಾರದಿಂದ ಸ್ಪಂದನೆ ಸಿಗುತ್ತಿಲ್ಲ. ಹಾಗಾಗಿ ಪ್ರತ್ಯೇಕ ರಾಜ್ಯದ ನಿಲುವು ತಳೆಯುವುದು ಅನಿವಾರ್ಯವಾಗಿದೆ' ಎಂದು ತಿಳಿಸಿದರು.

### ಪಾಟೀಲಗೆ ಸಚಿವ ಸ್ಥಾನ ನೀಡಲು ಆಗ್ರಹ: ಡೀಸೆಲ್ ಸುರಿದುಕೊಂಡ ಕಾರ್ಯಕರ್ತರು

• ಉದಯವಾಹಿನಿ ಗಜೇಂದ್ರಗಡ

ರೋಣ ಮತಕ್ಷೇತ್ರದ ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ ಪಟ್ಟಣದ ಕಾಲಕಾಲೇಶ್ವರ ವೃತ್ತದಲ್ಲಿ ನಡೆಯುತ್ತಿದ್ದ ಪ್ರತಿಭಟನೆ ಸಂದರ್ಭದಲ್ಲಿ ಇಬ್ಬರು ಕಾಂಗ್ರೆಸ್ ಕಾರ್ಯಕರ್ತರು ಮೈಮೇಲೆ ಡೀಸೆಲ್ ಸುರಿದುಕೊಂಡು ಹೈಡ್ರಾಮ ನಡೆಸಿದರು. ಪ್ರತಿಭಟನೆ ನಡೆಯುತ್ತಿದ್ದ ಸಂದರ್ಭದಲ್ಲಿ ವೃತ್ತದ ಒಂದು ಬದಿಯಲ್ಲಿ ದಿಂಡೂರ ಗ್ರಾಮದ ಸಂಗಪ್ಪ ತೇಜಿ ಮೈಮೇಲೆ ಡೀಸೆಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದರು. ತಕ್ಷಣ ಕಾರ್ಯಕರ್ತರು ಹಾಗೂ ಪೊಲೀಸರು ಆತನಿಂದ ಡೀಸೆಲ್ ಕ್ಯಾನ್ ಕಸಿಕುದಕೊಂಡು ಸಮಾಧಾನಪಡಿಸಿದರು.

ಪ್ರತಿಭಟನೆ ಮುಗಿದ ಬಳಿಕ ಮಾರನಬಸರಿ ಗ್ರಾಮದ ರವಿ ಅಬ್ಬಿಗೇರಿ ಕಾಲಕಾಲೇಶ್ವರ ವೃತ್ತದ ಮೇಲೆ ಹತ್ತಿ ಮೈಮೇಲೆ ಡೀಸೆಲ್ ಸುರಿದುಕೊಂಡರು. ತಕ್ಷಣ ಪೊಲೀಸರು ಆತನನ್ನು ತಡೆದರು.

### ಮದ್ಯದಂಗಡಿ ಸ್ಥಳಾಂತರಕ್ಕೆ ಒತ್ತಾಯ: ಗ್ರಾಮಸ್ಥರಿಂದ ರಸ್ತೆ ತಡೆದು ಪ್ರತಿಭಟನೆ

• ಉದಯವಾಹಿನಿ ಹಿರೇಮಳಲಿ

ತಾಲ್ಲೂಕಿನ ಹಿರೇಮಳಲಿ ಗ್ರಾಮದ ಬಳಿ ರಸ್ತೆ ಬದಿಯಲ್ಲಿರುವ ಮದ್ಯದ ಅಂಗಡಿಯನ್ನು ಕೂಡಲೇ ಸ್ಥಳಾಂತರಿಸಬೇಕು ಎಂದು ಒತ್ತಾಯಿಸಿ ರೈತ ಸಂಘದ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು. ನಾಲ್ಕು ವರ್ಷದ ಹಿಂದೆ ಗ್ರಾಮದ ಜಿಲ್ಲಾ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಮದ್ಯದ ಅಂಗಡಿ ತೆರೆಯಲಾಗಿದೆ.

ಆದರೆ ಇದರ ಮುಂದೆ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ನಡೆದ ಪ್ರತ್ಯೇಕ ಅಪಘಾತಗಳಲ್ಲಿ 9 ಜನ ಅಮಾಯಕರು ಪ್ರಾಣ ಕಳೆದುಕೊಂಡಿದ್ದಾರೆ. ಅಬಕಾರಿ ಇಲಾಖೆಯ ನಿಯಮದ ಪ್ರಕಾರ ರಸ್ತೆ ಬದಿಯಿಂದ 100 ಮೀಟರ್ ದೂರದಲ್ಲಿ ಮದ್ಯದ ಅಂಗಡಿ ಇರಬೇಕು. ಆದರೆ ಈ ಗ್ರಾಮದಲ್ಲಿ ನಿಯಮವನ್ನು ಮೀರಿ ರಸ್ತೆ ಬದಿಗೆ ಹೊಂದಿಕೊಂಡಂತೆ ಮದ್ಯದ ಅಂಗಡಿ ತೆರೆಯಲಾಗಿದೆ. ನಿಯಮ ಉಲ್ಲಂಘನೆಯಾಗಿದ್ದರೂ ಇಲಾಖೆಯವರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಪ್ರತಿಭಟನಕಾರರು ಆರೋಪಿಸಿದರು.

# ಕಬ್ಬುಕಟಾವಿಗೆ ವಲಸೆ ಹೋದ ಕಾರ್ಮಿಕರ ಬದುಕು ನರಕಸದೃಶ್ಯ

## ತಮ್ಮವರಿಂದ 6 ತಿಂಗಳುಗಟ್ಟಲೆ ದೂರವುಳಿದು, ಚಳಿ ಮಳೆಗೆ ಜಗ್ಗದೆ ಸಂಕಷ್ಟಗಳನ್ನೇ ಹೊದ್ದು ಮಲಗಿದರೂ ದುಡಿಮೆ ಮಾತ್ರ ದುಗ್ಗಾಣೆ ಎಂಬಂತಾಗಿದೆ

• ಉದಯವಾಹಿನಿ ಹಗರಿಬೊಮ್ಮನಹಳ್ಳಿ

ಕಬ್ಬಿಗೆ ಸೂಕ್ತ ಬೆಲೆ ನೀಡುವಂತೆ ನಡೆಸಿದ ಹೋರಾಟ ಇಡೀ ರಾಜ್ಯದ ಗಮನಸೆಳೆದಿದೆ. ಆದರೆ, ಕಬ್ಬು ಕಡಿಯಲು ವಲಸೆ ಹೋದ ಕೂಲಿ ಕಾರ್ಮಿಕರ ಬದುಕು ಮಾತ್ರ ನರಕಸದೃಶವಾಗಿಯೇ ಇದೆ.

ತಾಲ್ಲೂಕಿನ ನಾನಾ ತಾಂಡಗಳಿಂದ ಆಂಧ್ರದ ಗದ್ವಾಲ, ಚೆನ್ನೈನ ಸತ್ಯಮಂಗಲ, ಮಹಾರಾಷ್ಟ್ರದ ಕೊಲ್ಲಾಪುರ, ಸೊಲ್ಲಾಪುರ, ರಾಜ್ಯದ ಮೈಸೂರು, ಮಂಡ್ಯ, ಕಲಘಟಗಿ, ಯಾದಗಿರಿ, ಹುಬ್ಬಳ್ಳಿ ಜಿಲ್ಲೆಗಳಿಗೆ ಬರೋಬ್ಬರಿ 30 ಸಾವಿರಕ್ಕೂ ಹೆಚ್ಚು ಕೂಲಿ ಕಾರ್ಮಿಕರು 6 ತಿಂಗಳಿಗೂ ಹೆಚ್ಚು ಕಾಲ ವಲಸೆ ಹೋಗುವುದು ವಾಡಿಕೆ. ಆನೇಕಲ್ ತಾಂಡಾ, ರಾಯರಾಳು ತಾಂಡಾಗಳಲ್ಲೇ ಹೆಚ್ಚು ವಲಸೆ ಕೂಲಿ ಕಾರ್ಮಿಕರಿದ್ದಾರೆ. ದಿನ ಪೂರ್ತಿ ಮೈಮುರಿದು ದುಡಿದರೂ ಕೈಸೇರುವುದು ಬರೀ ಬಿಡಿಗಾಸು. ಕನಿಷ್ಠ ಕೂಲಿಯ ಭಾಗ್ಯವಿಲ್ಲದೆ ಹಲವು ವರ್ಷಗಳಿಂದಲೂ ತುತ್ತಿನ ಚೀಲ ತುಂಬಿಸಿಕೊಳ್ಳುವುದು, ಒಂದು ಸೂರು ಕಟ್ಟಿಕೊಳ್ಳುವುದು, ಮದುವೆ, ಮುಂಜಿಗಾಗಿ ಹಣ ಹೊಂದಿಸಲು ಅಸಹಯನೀಯ ಸಂಕಟ ಅನುಭವಿಸುತ್ತಾರೆ.

**ಭಾವನಾತ್ಮಕ ಸಂಬಂಧ ಕಡಿತ:** ದುಡಿಮೆಗೆ ತೆರಳುವ ಪಾಲಕರು ತಮ್ಮ ಮಕ್ಕಳು, ಹಿರಿಯರನ್ನು ಊರುಗಳಲ್ಲೇ ಬಿಟ್ಟು ತೆರಳುತ್ತಾರೆ. ಅವರಿಂದ ಭಾವನಾತ್ಮಕ ಸಂಬಂಧದಿಂದ ದೂರ ಉಳಿಯುವುದು ಅನಿವಾರ್ಯ. ಮನೋವೈಜ್ಞಾನಿಕ ಅಡ್ಡಪರಿಣಾಮವೂ ಈ ಕಾರ್ಮಿಕರನ್ನು ಬಾಧಿಸುತ್ತದೆ.

ತಮ್ಮವರಿಂದ 6 ತಿಂಗಳುಗಟ್ಟಲೆ ದೂರವುಳಿದು, ಚಳಿ ಮಳೆಗೆ ಜಗ್ಗದೆ ಸಂಕಷ್ಟಗಳನ್ನೇ ಹೊದ್ದು ಮಲಗಿದರೂ ದುಡಿಮೆ ಮಾತ್ರ ದುಗ್ಗಾಣೆ ಎಂಬಂತಾಗಿದೆ. ಆನೇಕಲ್ ತಾಂಡಾದಲ್ಲಿ ಲೋಡಿಂಗ್ ವೇಳೆ ಬಿದ್ದು ಒಬ್ಬ ಕಾರ್ಮಿಕ ಕಾಲು ಮುರಿದುಕೊಂಡು ಮೂಲೆ ಸೇರಿದ್ದಾರೆ. ತಾಲ್ಲೂಕಿನ ತಾಂಡಾವೊಂದರಲ್ಲಿ ಮಹಿಳೆಯೊಬ್ಬರು ಲೈಂಗಿಕ ದೌರ್ಜನ್ಯಕ್ಕೊಳಗಾಗಿದ್ದಾರೆ, ಒಂದಿಬ್ಬರು ಅನಾರೋಗ್ಯಕ್ಕೆ ತುತ್ತಾಗಿದ್ದಾರೆ. ಆದರೆ, ಸರಕಾರ ಮಾತ್ರ ಕಾರ್ಮಿಕರ ಸಮಸ್ಯೆಗೆ ಕಣ್ಣು ತೆರೆಯದಾಗಿದೆ.

- ರಾಜ್ಯದಲ್ಲಿ ಕಬ್ಬಿಗೆ ಸೂಕ್ತ ಬೆಲೆ ಸಿಕ್ಕರು, ಕಬ್ಬು ಕಟಾವು ಮಾಡುವ ಕೂಲಿ ಕಾರ್ಮಿಕರ ಸಂಕಷ್ಟ ಮಾತ್ರ ತಪ್ಪುತ್ತಿಲ್ಲ
- ಆಂಧ್ರ, ಮಹಾರಾಷ್ಟ್ರ, ಮೈಸೂರು, ಮಂಡ್ಯ ಸೇರಿದಂತೆ ನಾನಾ ಪ್ರದೇಶಗಳಿಂದ ಕೂಲಿಗೆ ಬರುವವರಿಗೆ ಕನಿಷ್ಟ ಸೌಲಭ್ಯವೂ ಇಲ್ಲ
- ತಾಂಡಾದಲ್ಲಿರುವ ಮಹಿಳೆಯರಿಗೆ ಬಾತ್ ರೂಂ ಸೌಲಭ್ಯವೂ ಇಲ್ಲ


☛ ಉದಯವಾಹಿನಿ ಚಿತ್ರ

ಯಾವ ಸರಕಾರವೂ ಕಬ್ಬು ಕಡಿಯುವ ಕಾರ್ಮಿಕರ ಸಮಸ್ಯೆ ಕೇಳಿಲ್ಲ. ಎಲ್ಲರೂ ನಮ್ಮಂತವರ ಅರ್ಜಿಗಳನ್ನು ಎಡಗೈಲಿ ತಗೊಂಡು ಬಲಗೈಲಿ ಒಗೆಯುತ್ತಾರೆ. ಕಬ್ಬು ಕಡಿಯುವವರಿಗೆ ಸೌಲಭ್ಯ ಕೊಡಿ ಅಂತ ಸಚಿವರಿಗೂ ಮನವಿ ಕೊಟ್ಟಿದ್ದೇವೆ. -ಪುಂಡಲೀಕ ನಾಯ್ಕ
ಕಬ್ಬು ಕಟಾವು ಮೇಸ್ತ್ರಿ ಆನೇಕಲ್ ತಾಂಡಾ

## ಸಂಕಷ್ಟಗಳ ಸರಮಾಲೆ

ವಲಸಿಗ ಕಾರ್ಮಿಕರು ವಾಸಿಸುವ ಟೆಂಟ್‌ಗಳಿಗೆ ಕನಿಷ್ಠ ಸೌಲಭ್ಯಗಳಿಲ್ಲ. ನೆಲದಲ್ಲಿ ನಾಲ್ಕು ಕಟ್ಟಿಗೆಗಳನ್ನು ಊರಿ, ಅವುಗಳ ಸುತ್ತ ಬಟ್ಟೆ ಕಟ್ಟಿದರೆ ಅದುವೇ ಕಬ್ಬು ಕಡಿಯುವವರ ಬಾತ್ ರೂಂ. ಹಾಕಿದ ಟೆಂಟ್ ಮುಂಭಾಗದಲ್ಲಿಒಂದು ದೊಡ್ಡ ಕಲ್ಲು ಇರಿಸಿದರೆ ಅದುವೇ ಅವರ ಮನೆಗೆ ಬೀಗ ಹಾಕಿದಂತೆ. ಕೆಲಸದ ವೇಳೆ ಹಾವು, ಚೇಳು ಕಡಿದರೆ, ಲೋಡಿಂಗ್ ವೇಳೆ ಕುಸಿದು ಬಿದ್ದರೆ, ಅಪಘಾತ ಸಂಭವಿಸಿದರೆ, ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯವಾದರೆ ಎಲ್ಲವನ್ನೂ ತುಟಿಕಚ್ಚಿ ಸಹಿಸಿಕೊಳ್ಳಬೇಕು. ಸರಕಾರ, ಕಾರ್ಖಾನೆಯ ಮಾಲೀಕರು, ಸ್ಥಳೀಯ ಆಡಳಿತಗಳ ಮುಖ್ಯಸ್ಥರು ಸೇರಿ ಯಾರೊಬ್ಬರೂ ಕೂಲಿ ಕಾರ್ಮಿಕರ ಸಂಕಷ್ಟಗಳಿಗೆ ಪರಿಹಾರ ಕೊಡಿಸಿಲ್ಲ. ಮುಂಜಾನೆ 8ರಿಂದ ಸಂಜೆ 6ವರೆಗೆ ಎಡಬಿಡದೇ ದುಡಿದರೂ ಕೂಲಿಕಾರರಿಗೆ ಕೇವಲ 450ರೂ. ಸಿಗುತ್ತದೆ. ಉದ್ಯೋಗ ಖಾತರಿ ಯೋಜನೆಯಡಿ ಕಬ್ಬು ಕಟಾವು ಅಳವಡಿಸುವ ಚಿಂತನೆಗೆ ಇಂಬು ಕೊಡಬೇಕಿದೆ.

## ದಿನಪೂರ್ತಿ ದುಡಿದರೂ ಅಲ್ಪ ಕೂಲಿ

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಕಬ್ಬು ಕಟಾವು ಕಾರ್ಮಿಕರ ಬದುಕು ದುಸ್ತರವಾಗಿದೆ. ಆಂಧ್ರ, ಮಹಾರಾಷ್ಟ್ರ, ಮೈಸೂರು, ಮಂಡ್ಯ ಸೇರಿದಂತೆ ಹಲವು ಜಿಲ್ಲೆಗಳಿಗೆ 30 ಸಾವಿರಕ್ಕೂ ಹೆಚ್ಚು ಕಾರ್ಮಿಕರು 6 ತಿಂಗಳಿಗೂ ಹೆಚ್ಚು ಕಾಲ ವಲಸೆ ಹೋಗುತ್ತಾರೆ. ಕನಿಷ್ಠ ಸೌಲಭ್ಯಗಳಿಲ್ಲದ ಟೆಂಟ್‌ಗಳಲ್ಲಿ ವಾಸಿಸುತ್ತಾ, ದಿನಪೂರ್ತಿ ದುಡಿದರೂ ಅಲ್ಪ ಕೂಲಿ ಪಡೆಯುತ್ತಾರೆ. ಅದರಲ್ಲೂ ಅಲ್ಲಿ ಬಾತ್ ರೂಂ ಸೌಲಭ್ಯ ಸಹ ಇಲ್ಲದೆ ಅಲ್ಲಿನವರ ಪರಿಸ್ಥಿತಿ ಶೋಚನೀಯವಾಗಿದೆ. ಆದಾಗ್ಯೂ, ಸರಕಾರದಿಂದ ಯಾವುದೇ ಪರಿಹಾರ ಸಿಗುತ್ತಿಲ್ಲ. ತಮ್ಮ ಕುಟುಂಬದಿಂದ ದೂರವಿದ್ದು, ಸಂಕಷ್ಟ ಎದುರಿಸುತ್ತಿದ್ದಾರೆ.

# ಲಕ್ಷಗಟ್ಟಲೆ ಪೀಕಿದರೂ ಅಮೆರಿಕದಲ್ಲಿ ಸಿಗದ ವೈದ್ಯಕೀಯ ಸೇವೆ

**ನವದೆಹಲಿ:** ಅಮೆರಿಕದಲ್ಲಿ ಆರೋಗ್ಯ ಸೇವೆಗಳು ತುಟ್ಟಿಯಾಗಿರುವುದು ತಕ್ಷಣಕ್ಕೆ ಸೇವೆಗಳು ಸಿಗದಂಥ ಪರಿಸ್ಥಿತಿಯಿಂದ ಬೇಸರಗೊಂಡಿರುವ ಅನಿವಾಸಿ ಭಾರತೀಯ ದಂಪತಿ, ತಮ್ಮಿಬ್ಬರು ಅವಳಿ ಮಕ್ಕಳೊಂದಿಗೆ ಅಮೆರಿಕ ಬಿಟ್ಟು ಭಾರತಕ್ಕೆ ಆಗಮಿಸಿದ್ದಾರೆ. ತಮ್ಮ ಇನ್ ಸ್ಟಾಗ್ರಾಂನಲ್ಲಿ ಅವರು ಈ ಕುರಿತಂತೆ ಹಾಕಿರುವ ಪೋಸ್ಟ್ ವೈರಲ್ ಆಗಿದ್ದು ಅವರ ನಿರ್ಧಾರವನ್ನು ಖುದ್ದು ಅಮೆರಿಕದವರೇ ಶ್ಲಾಘಿಸಿದ್ದಾರೆ.

ತಮ್ಮ ಪೋಸ್ಟ್‌ನಲ್ಲಿ ಅವರು ಪಟ್ಟಿರುವ ಪಡಿಪಾಟಲನ್ನು ವರ್ಣಿಸಿರುವ ಅವರು, ಅಮೆರಿಕದಲ್ಲಿ ಪ್ರತಿಯೊಬ್ಬರಿಗೂ ವೈದ್ಯಕೀಯ ವಿಮೆ ಅತ್ಯಗತ್ಯ. ಅದಿಲ್ಲದಿದ್ದರೆ ಒಂದು ಸಣ್ಣ ಕ್ಲಿನಿಕ್ ನಲ್ಲೂ ನಿಮ್ಮನ್ನು ಯಾರೂ ಒಳಗೆ ಬಿಟ್ಟುಕೊಳ್ಳುವುದಿಲ್ಲ. ನಾವು ನಮ್ಮ ಕುಟುಂಬಕ್ಕಾಗಿ ಮಾಸಿಕವಾಗಿ 14 ಸಾವಿರ ಡಾಲರ್ ಮೊತ್ತದ ಮೆಡಿಕಲ್ ಇನ್ಶೂರೆನ್ಸ್ ಪಡೆದಿದ್ದೇವೆ. ಆದರೂ, ಗಂಡ-ಹೆಂಡತಿಯಾದ ನಮಗೆ ತಿಂಗಳಿಗೆ 1,600 ರೂ. ಪ್ರೀಮಿಯಂ ಇರುವ ಮತ್ತೊಂದು ಪ್ರತ್ಯೇಕ ಇನ್ಶೂರೆನ್ಸ್ ಕೂಡ ಮಾಡಿಸಿಕೊಂಡಿದ್ದೇವೆ. ಆದರೂ, ಆಸ್ಪತ್ರೆಗೆ ಸೇರಿದಾಗ ನಮ್ಮ ಕೈಯ್ಯಿಂದಲೇ 15 ಸಾವಿರ ಡಾಲರ್ ಖರ್ಚಾಗಿದೆ. ಅದನ್ನು ಆಮೇಲೆ ಕ್ಲೈಮ್ ಮಾಡಿ ಪಡೆಯಬಹುದಾದರೂ ಇಷ್ಟೆಲ್ಲಾ ಖರ್ಚು ಮಾಡುವ ನಮಗೆ ಸರಿಯಾದ ಸಮಯದಲ್ಲಿ ವೈದ್ಯಕೀಯ ಸೇವೆಯೇ ಸಿಗದಿದ್ದರೆ ಹೇಗೆ ಎಂದು ಅವರು ಪ್ರಶ್ನಿಸಿದ್ದಾರೆ. ಆದರೆ, ಭಾರತದಲ್ಲಿ ಹಾಗಿಲ್ಲ. ಭಾರತದಲ್ಲಿ ಸಣ್ಣ ಶೀತ, ನೆಗಡಿಯಂಥ ಸಮಸ್ಯೆ ಬಂದರೂ ಸಾಕು ನೀವು ತಕ್ಷಣವೇ ಹೋಗಿ ಯಾವುದೇ ವೈದ್ಯರನ್ನು ಭೇಟಿ ಮಾಡಿ ಉತ್ತಮ ಔಷಧಗಳನ್ನು ಪಡೆದು ಕೆಲವೇ ದಿನಗಳಲ್ಲಿ ಆ ಕಾಯಿಲೆಯಿಂದ ಹೊರಬರಬಹುದು. ಆದರೆ, ಅಮೆರಿಕದಲ್ಲಿ ಹಾಗಿಲ್ಲ. ಒಂದು ಸಣ್ಣ ಶೀತ-ನೆಗಡಿ ಬಂದರೂ ನೀವು ವೈದ್ಯರ ಭೇಟಿಗಾಗಿಯೇ ದಿನಗಟ್ಟಲೆ ಕಾಯಬೇಕು. ಅವರಿಂದ ಔಷಧಿ ಪಡೆಯುವುದು ಆಮೇಲಿನ ವಿಚಾರ ಎಂದಿದ್ದಾರೆ. ಹಾಗಂತ, ಆರೋಗ್ಯ ಸೇವೆಗಳ ವಿಚಾರದಲ್ಲಿ ಭಾರತವೇ ಪರ್ಫೆಕ್ಟ್ ಎಂದು ನಾವು ಹೇಳುವುದಿಲ್ಲ. ಆದರೆ, ಇಲ್ಲಿ ಸಿಗುವಷ್ಟು ಸುಲಭವಾಗಿ ವೈದ್ಯಕೀಯ ಸೇವೆಗಳು ಅಲ್ಲಿ ಸಿಕ್ಕುವುದಿಲ್ಲ. ಇಲ್ಲಿಯೂ ಅತ್ಯುತ್ತಮ ವೈದ್ಯರುಗಳಿದ್ದಾರೆ. ಅವರ ಬಳಿ ಹೋದರೆ ಸಾಕು ಉತ್ತಮ ಔಷಧಿ ಆರೈಕೆ ಸಿಕ್ಕುತ್ತದೆ. ಹೆಣ್ಣುಮಕ್ಕಳಿಗೆ ಮಗುವಿನ ಹೆರಿಗೆ, ಬಾಣಂತನ ಎನ್ನುವುದನ್ನು ಇಲ್ಲಿನ ಆಸ್ಪತ್ರೆಯ ವೈದ್ಯರು, ಶುಶ್ರೂಷಕರು ಅತ್ಯುತ್ತಮವಾಗಿ ನಿಭಾಯಿಸುತ್ತಾರೆ. ಆ ನಿಟ್ಟಿನಲ್ಲಿ ಹೇಳುವುದಾದರೆ ಭಾರತವೇ ಬೆಸ್ಟ್ ಎಂದು ತಿಳಿಸಿದ್ದಾರೆ. ಅವರ ಈ ಇನ್ ಸ್ಟಾಗ್ರಾಂ ಪೋಸ್ಟ್ ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹಲವಾರು ಮಂದಿ ನೀವು ಭಾರತಕ್ಕೆ ಬಂದು ಒಳ್ಳೇ ಕೆಲಸ ಮಾಡಿದಿರಿ ಎಂದು ಹೇಳಿದ್ದಾರೆ. ಒಬ್ಬರು ಪ್ರತಿಕ್ರಿಯೆಸಿ, ನೀವು ಹೇಳಿದ್ದು ನಿಜ. ಆರೋಗ್ಯ ಸೇವೆಗಳಿಗೆ ಭಾರತ ಪರ್ಫೆಕ್ಟ್ ಅಲ್ಲ. ಅಮೆರಿಕದಲ್ಲಿರುವಂಥ ಲಕ್ಸುರಿ ಆರೋಗ್ಯ ಸೇವೆ ಇಲ್ಲಿಲ್ಲ. ಆದರೆ, ಇಲ್ಲಿ ಬೇಗನೇ ವೈದಕೀಯ ನೆರವು ಸಿಗುತ್ತದೆ. ಒಳ್ಳೊಳ್ಳೆ ಡಾಕ್ಟರ್ ಇದ್ದಾರೆ. ಬೇಗನೇ ಅವರ ಚಿಕಿತ್ಸೆಗಳನ್ನು ಪಡೆಯಬಹುದು ಬೇಗನೇ ಕಾಯಿಲೆ ವಾಸಿಯಾಗುತ್ತದೆ. ಅಮೆರಿಕಕ್ಕೆ ಹೋಲಿಸಿದರೆ ಖರ್ಚೂ ಕಡಿಮೆ ಎಂದು ಹೇಳಿದ್ದಾರೆ.

### ಈ ದ್ವೀಪ ಚೀನಾದ ದೈತ್ಯ ಫುಜಿಯಾನ್ ವಿಮಾನವಾಹಕ ನೌಕೆಯ ಶಕ್ತಿಗೆ ಸಮಾನವಾಗಿದೆ ಎಂದು ತಿಳಿದು ಬಂದಿದೆ

# ವಿಶ್ವದಲ್ಲೇ ಪ್ರಥಮ ಕೃತಕ ತೇಲುವ ದ್ವೀಪ ನಿರ್ಮಿಸುತ್ತಿದೆ ಚೀನಾ

**ಶಾಂಘೈ:** ಚೀನಾ ತಂತ್ರಜ್ಞಾನ ಮತ್ತು ಮಿಲಿಟರಿ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ಇದಕ್ಕೊಂದು ಸಾಕ್ಷಿಯೆಂಬಂತೆ, ಚೀನಾ ವಿಶ್ವದ ಮೊದಲ ತೇಲುವ ಕೃತಕ ದ್ವೀಪ ನಿರ್ಮಾಣ ಮಾಡುತ್ತಿದೆ. ಇದು 2028 ರಲ್ಲಿ ಪೂರ್ಣಗೊಳ್ಳಲಿದ್ದು, ಪರಮಾಣು ಬಾಂಬ್ ದಾಳಿಯನ್ನೂ ತಡೆಯುವ ಸಾಮರ್ಥ್ಯ ಹೊಂದಿದೆ ಎಂದು ಹೇಳಲಾಗುತ್ತಿದೆ. ಅಧಿಕೃತವಾಗಿ ಇದು ಸಂಶೋಧನಾ ನೌಕೆಯಾಗಿದ್ದರೂ, ಇದರ ಪರಮಾಣು ನಿರೋಧಕ ಸಾಮರ್ಥ್ಯ ಬಾರಿ ಚರ್ಚೆಗೆ ಗ್ರಾಸವಾಗಿದೆ.

**ಪ್ರಪಂಚದಲ್ಲೇ ಮೊದಲ ಆರ್ಟಿಫಿಶಿಯಲ್ ದ್ವೀಪ:** ಚೀನಾ ನಿರ್ಮಿಸುತ್ತಿರುವ ಈ ಡೀಪ್-ಸೀ ಆಲ್-ವೆದರ್ ರೆಸಿಡೆಂಟ್ ಫ್ಲೋಟಿಂಗ್ ರಿಸರ್ಚ್ ಫೆಸಿಲಿಟಿ' ಚೀನಾದ 14ನೇ ಪಂಚವಾರ್ಷಿಕ ಯೋಜನೆಯ ಅಡಿಯಲ್ಲಿ ರಾಷ್ಟ್ರೀಯ ವೈಜ್ಞಾನಿಕ ಮೂಲಸೌಕರ್ಯ ಕಾರ್ಯಕ್ರಮವಾಗಿ ಪಟ್ಟಿ ಮಾಡಲ್ಪಟ್ಟಿದೆ. ಇದು ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಅಭಿವೃದ್ಧಿಯಲ್ಲಿದೆ. ಇದನ್ನು ದೂರದ ಸಮುದ್ರ, ತೇಲುವ ಮೊಬೈಲ್ ದ್ವೀಪ' ಎಂದೂ ಕರೆಯಲಾಗುತ್ತದೆ.

ಇದು ಕಠಿಣ ಸಮುದ್ರಗಳಲ್ಲೂ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿದ್ದು, ಭೂಮಿಯ ಮೇಲಿನ ಶಕ್ತಿಶಾಲಿ ಉಷ್ಣವಲಯದ ಚಂಡಮಾರುತಗಳನ್ನೂ ತಡೆಯಬಲ್ಲದು ಎಂದು ತಿಳಿದು ಬಂದಿದೆ.

- **2028ರ ವೇಳೆಗೆ ವಿಶ್ವದ ಮೊದಲ ಆರ್ಟಿಫಿಶಿಯಲ್ ತೇಲುವ ದ್ವೀಪ ನಿರ್ಮಿಸಲು ಸಜ್ಜಾಯ್ತು ಚೀನಾ**
- **ಚೀನಾ ನಿರ್ಮಿಸುತ್ತಿರುವ ಈ ದ್ವೀಪಕ್ಕೆ ಪರಮಾಣು ದಾಳಿಯನ್ನು ತಡೆಯುವ ಶಕ್ತಿಯಿದೆಯಂತೆ**
- **ಚೀನಾ ನಿರ್ಮಿಸುತ್ತಿರುವ ಈ ದ್ವೀಪಕ್ಕಿದೆಯಂತೆ ಪರಮಾಣು ನಿರೋಧಕ ಶಕ್ತಿ**

ಪರಮಾಣು ಸ್ಫೋಟಗಳನ್ನು ತಡೆದುಕೊಳ್ಳಲು ವಿನ್ಯಾಸಗೊಳಿಸಲಾದ 78,000 ಟನ್ ತೂಕದ ಕೃತಕ ದ್ವೀಪವನ್ನು ಚೀನಾ ನಿರ್ಮಿಸುವ ಪ್ರಕ್ರಿಯೆಯಲ್ಲಿದೆ.

ಇದು ಮೊಬೈಲ್, ಅರೆ-ಸಬ್ಮರ್ಸಿಬಲ್, ಅವಳಿ-ಹಲ್ ಪ್ಲಾಟ್‌ಫಾರ್ಮ್ ಆಗಿದ್ದು, ಹೊಸ ಸರಬರಾಜುಗಳ ಅಗತ್ಯವಿಲ್ಲದೆ ನಾಲ್ಕು ತಿಂಗಳ ಕಾಲ 238 ಮಾನವರಿಗೆ ಸಹಾಯ ಮಾಡುವ ಸಾಮರ್ಥ್ಯ ಹೊಂದಿದೆ.

**ದೈತ್ಯ ಫುಜಿಯಾನ್ ವಿಮಾನವಾಹಕ ನೌಕೆಗೆ ಸಮಾನವಾಗಿದೆಯಂತೆ ಈ ದ್ವೀಪ:** ಬೃಹತ್ ವೇದಿಕೆಯಾಗಿದ್ದು, ಈ ದ್ವೀಪವು 138 ಮೀಟರ್ ಉದ್ದ ಮತ್ತು 85 ಮೀಟರ್ ಅಗಲ (125 ಅಡಿ ಉದ್ದ ಮತ್ತು 279 ಅಡಿ ಅಗಲ) ಇರಲಿದ್ದು ಇದರ ಡೆಕ್ ಅಲೆಗಳ ಮೇಲೆ 45 ಮೀಟರ್ ಎತ್ತರದಲ್ಲಿರುತ್ತದೆ. ಈ ಹೊಸ ತೇಲುವ ಕೃತಕ ದ್ವೀಪವು ಚೀನಾದ ಹೊಸ ಫುಜಿಯಾನ್ ವಿಮಾನವಾಹಕ ನೌಕೆಗೆ ಸಮಾನ ಗಾತ್ರದ್ದಾಗಿರಲಿದೆ. ಇದರ ಸ್ಥಳಾಂತರ ಸಾಮರ್ಥ್ಯ ಸುಮಾರು 80,000 ಟನ್ ಇರಲಿದೆ ಎಂದು ಅಂದಾಜಿಸಲಾಗಿದೆ. ಇದು ಗಂಟೆಗೆ 15 ನಾಟಿಕಲ್ ಮೈಲಿ ವೇಗದಲ್ಲಿ ಸಂಚರಿಸಬಲ್ಲದು ಮತ್ತು ನೂರಕ್ಕೂ ಹೆಚ್ಚು ಸಂಶೋಧಕರಿಗೆ ಆಶ್ರಯ ನೀಡುವ ಸಾಮರ್ಥ್ಯ ಹೊಂದಿದೆ.



### ಚೀನಾ ಅಧಿಕಾರಿಗಳು ಹೇಳೂದೇನು?

**ಚೀನಾದ ಅಧಿಕಾರಿಗಳ ಪ್ರಕಾರ, ಡೀಪ್-ಸೀ ಆಲ್-ವೆದರ್ ರೆಸಿಡೆಂಟ್ ಫ್ಲೋಟಿಂಗ್ ರಿಸರ್ಚ್ ಫೆಸಿಲಿಟಿ ಸಂಪೂರ್ಣವಾಗಿ ಸಂಶೋಧನಾ ನೌಕೆಯಾಗಿದೆ. ಈ ಸೌಲಭ್ಯವು ಸಾಗರ ವಿಜ್ಞಾನದಲ್ಲಿ ಒಂದು ದೊಡ್ಡ ಬದಲಾವಣೆಯನ್ನು ತರಲಿದೆ. ಯಾವುದೇ ಪ್ರಯೋಗಾಲಯ ಅಥವಾ ಅಸ್ತಿತ್ವದಲ್ಲಿರುವ ಹಡಗು ನೀಡಲು ಸಾಧ್ಯವಾಗದ ನೈಜ-ಪ್ರಮಾಣದ ಪರೀಕ್ಷಾ ಸಾಮರ್ಥ್ಯಗಳನ್ನು ಇದು ಒದಗಿಸುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆಂದು ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿದೆ.**

### ದೀರ್ಘಕಾಲ ವಾಸಿಸಲು ವಿನ್ಯಾಸ

**ಇನ್ನು, ಶಾಂಘೈ ಜಿಯಾವೋ ಟಾಂಗ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಯಾಂಗ್ ಡೆಕಿಂಗ್ ತಮ್ಮ ಸಂಶೋಧನಾ ಲೇಖನವೊಂದರಲ್ಲಿ ಈ ಕುರಿತು ಮಾಹಿತಿ ನೀಡಿದ್ದು, ಈ ಆಳ ಸಮುದ್ರದ ಪ್ರಮುಖ ವೈಜ್ಞಾನಿಕ ಸೌಲಭ್ಯವು ಎಲ್ಲಾ ಹವಾಮಾನದಲ್ಲೂ, ದೀರ್ಘಕಾಲ ವಾಸಿಸಲು ವಿನ್ಯಾಸಗೊಳಿಸಲಾಗಿದೆ. ಇದು ತುರ್ತು ವಿದ್ಯುತ್ ಮತ್ತು ಸಂವಹನ ವ್ಯವಸ್ಥೆಗಳನ್ನು ಸಹ ಒಳಗೊಂಡಿರುತ್ತದೆ. ಸುಗಮ ಸಂಚರಣೆ ನಿಯಂತ್ರಣವನ್ನು ಖಚಿತಪಡಿಸಿಕೊಳ್ಳಲು ಸೂಕ್ತ ವ್ಯವಸ್ಥೆಗಳನ್ನು ಅಳವಡಿಸಲಾಗುವುದು ಎಂದು ವಿವರಿಸಿದ್ದಾರೆ.**

## ಟ್ರಂಪ್ ಅಧಿಕಾರದಿಂದ ಕೆಳಗಿಳಿದ ಮೇಲೆಯೇ ನಾನು ನನ್ನ ಸ್ಥಾನ ತೊರೆಯುವುದು ಎಂದು ಟ್ರಂಪ್‌ಗೆ ಜಿಮ್ಮಿ ಟಾಂಗ್

**ವಾಷಿಂಗ್ಟನ್:** ಅಮೆರಿಕಾ ಅಧ್ಯಕ್ಷ ಹಾಗೂ ಅಮೆರಿಕಾದ ಮಾಧ್ಯಮಗಳ ನಡುವೆ ಯಾವಾಗಲೂ ಏನೋ ಒಂದು ಸುದ್ದಿ ಇದ್ದೇ ಇರುತ್ತದೆ. ಡೊನಾಲ್ಡ್ ಟ್ರಂಪ್ ಅವರ ಪರವಾಗಿ ಮಾತನಾಡದ ಮಾಧ್ಯಮಗಳ ವಿರುದ್ದ ಟ್ರಂಪ್ ಯಾವಾಗಲೂ ಏನಾದರೂ ಒಂದು ಟೀಕೆ ಮಾಡುವುದು ಅಥವಾ ಅಲ್ಲಿನ ಪತ್ರಕರ್ತರನ್ನು ಹೀಯಾಳಿಸಿ ಮಾತನಾಡುವುದು ಸರ್ವೇ ಸಾಮಾನ್ಯವಾಗಿದೆ. ಅದಕ್ಕೆ ಪ್ರತಿಯಾಗಿ ಅಮೆರಿಕಾದ ಕೆಲವು ಮಾಧ್ಯಮ ಪ್ರತಿನಿಧಿಗಳು ಸಹ ಟ್ರಂಪ್ ಟೀಕೆಗಳಿಗೆ ಸರಿಯಾಗಿಯೇ ಟಾಂಗ್ ನೀಡುತ್ತಿರುತ್ತಾರೆ. ಈ ಇಂತಹುದೇ ಒಂದು ಘಟನೆ ಈಗ ಭಾರಿ ಚರ್ಚೆಯಲ್ಲಿದೆ.

ಈಗಲೂ ಸಹ ಟ್ರಂಪ್ ರೀತಿ ಅಮೆರಿಕಾದ ಖ್ಯಾತ ಮಾಧ್ಯಮ ಪ್ರತಿನಿಧಿ ಜಿಮ್ಮಿ ಕಿಮೆಲ್‌ಗೆ ಪ್ರತಿಭೆಯೇ ಇಲ್ಲ ಆದರೂ ಅವರನ್ನು ಇನ್ನು ABC ಏಕೆ ಇಟ್ಟುಕೊಂಡಿದೆ ಎಂಬ ಪ್ರಶ್ನೆಗೆ ಲೈವ್ ಕಾರ್ಯಕ್ರಮದಲ್ಲೇ ಉತ್ತರಿಸಿರುವ ಜಿಮ್ಮಿ ಕಿಮೆಲ್ ಟ್ರಂಪ್‌ಗೆ ನೀವು ನನ್ನ ಕಾರ್ಯಕ್ರಮ ಲೈವ್‌ನಲ್ಲಿ ನೋಡುತ್ತಿರೆಂದು ನನಗೆ ಗೊತ್ತು ಎಂದು ಹೇಳಿ ನೀವು ರಾಜೀನಾಮೇ ನೀಡದ ಮೇಲೆ ನಾನು ಇಲ್ಲಿಂದ ಹೋಗುತ್ತೇನೆ ಎಂದು ಟ್ರಂಪ್ ಕಾಲೆಳೆದಿದ್ದಾರೆ.

**ಕಿಮೆಲ್ ಒಬ್ಬ ಕಳಪೆ ರೇಟಿಂಗ್ ಹೊಂದಿರುವ ಪ್ರತಿಭೆ ಇಲ್ಲದ ವ್ಯಕ್ತಿ ಎಂದ ಟ್ರಂಪ್:** ಈ ಮೊದಲು ಟ್ರಂಪ್ ತಮ್ಮ ಟ್ರೂತ್ ಸೋಶಿಯಲ್ ಪೋಸ್ಟ್‌ನಲ್ಲಿ ಜಿಮ್ಮಿ ಕಿಮೆಲ್ ಒಬ್ಬ ಪ್ರತಿಭೆಯಿಲ್ಲದ ಮತ್ತು ಅತ್ಯಂತ ಕಳಪೆ ಟೆಲಿವಿಷನ್ ರೇಟಿಂಗ್ ಹೊಂದಿರುವ ವ್ಯಕ್ತಿ.



ಇಂತವರನ್ನು ABC ಇನ್ನು ಏಕೆ ತಮ್ಮ ಸಂಸ್ಥೆಯಲ್ಲಿ ಇಟ್ಟುಕೊಂಡು ಅವರನ್ನು ಪ್ರಸಾರ ಮಾಡುತ್ತಿದೆ. ಸುದ್ದಿ ಸಂಸ್ಥೆಗಳು ಇಂತವರನ್ನು ಏಕೆ ಸಹಿಸಿಕೊಳ್ಳುತ್ತಿವೆ ಎಂದು ಹೇಳುವ ಮೂಲಕ ಕಿಮೆಲ್ ಶೋ ನಿಲ್ಲಿಸುವಂತೆ ಕೇಳಿದ್ದಾರೆ. ಅಲ್ಲದೆ, ಇವರದು ಸಂಪೂರ್ಣವಾಗಿ ಪಕ್ಷಪಾತದ ಸುದ್ದಿ, ಇವರನ್ನು ಪ್ರಸಾರ ಮಾಡುವುದರಿಂದ ದೂರ ಸರಿಯಿರಿ ಎಂಬ ಸೂಚನೆಯನ್ನು ನೀಡಿದ್ದಾರೆ.

**ಲೈವ್ ಕಾರ್ಯಕ್ರಮದಲ್ಲೇ ಟ್ರಂಪ್ ಕಾಲೆಳೆದ ಕಿಮೆಲ್:** ಇನ್ನು, ಟ್ರಂಪ್‌ನ ಈ ಪೋಸ್ಟ್‌ಗೆ ಲೈವ್ ಕಾರ್ಯಕ್ರಮದಲ್ಲೇ ಉತ್ತರಿಸಿದ್ದು, ಅವರು ನಮ್ಮನ್ನು ನೇರವಾಗಿ ನೋಡುತ್ತಾರೆ ನಮಸ್ಕಾರ, ಅಧ್ಯಕ್ಷರೇ, ಹೇಗಿದ್ದೀರಿ? ಯೂಟ್ಯೂಬ್‌ಗೆ ಬದಲಾಗಿ ಟಿವಿಯಲ್ಲಿ ನಮ್ಮನ್ನು ನೋಡಿದ್ದಕ್ಕೆ ಧನ್ಯವಾದಗಳು. ನಿಮ್ಮಂತಹ ವೀಕ್ಷಕರು ನಮ್ಮನ್ನು ಪ್ರಸಾರದಲ್ಲಿ ಇರಿಸುತ್ತಾರೆ, ಇದು ವಿಪರ್ಯಾಸ... ಅಲ್ಲದೆ, ಯಾರಿಗಾದರೂ ಕೆಟ್ಟ ರೇಟಿಂಗ್‌ಗಳ ಬಗ್ಗೆ ತಿಳಿದಿದ್ದರೆ, ಅದು ಆ ವ್ಯಕ್ತಿ ಎಂದು ಟ್ರಂಪ್ ನ ಎರಡನೇ ಅವಧಿಯ ಕಡಿಮೆ ಅನುಮೋದನೆ ರೇಟಿಂಗ್‌ಗಳನ್ನು ಉಲ್ಲೇಖಿಸಿ ಹಾಸ್ಯಾಸ್ಪದವಾಗಿಯೇ ಟಾಂಗ್ ನೀಡಿದ್ದಾರೆ.


- **ಮತ್ತೆ ಭುಗಿಲೆದ್ದ ಡೊನಾಲ್ಡ್ ಟ್ರಂಪ್ ಹಾಗೂ ಅಮೆರಿಕಾದ ಪ್ರಸಿದ್ದ ಶೋ ಪ್ರತಿನಿಧಿ ಜಿಮ್ಮಿ ಕಿಮೆಲ್ ನಡುವಿನ ವಾಗ್ವಾದ.**
- **ಜಿಮ್ಮಿ ಕಿಮೆಲ್ ಅನ್ನು ಅತ್ಯಂತ ಕಳಪೆ ರೇಟಿಂಗ್ ಹೊಂದಿರುವ ಹಾಗೂ ಪ್ರತಿಭೆ ಇಲ್ಲದ ವ್ಯಕ್ತಿ ಎಂದು ಕರೆದ ಟ್ರಂಪ್ ಕಿಮೆಲ್ ಅನ್ನು ವಜಾಗೊಳಿಸುವಂತೆ ಆಗ್ರಹಿಸಿದ್ದಾರೆ.**
- **ಟ್ರಂಪ್ ಪೋಸ್ಟ್ ಗೆ ಲೈವ್ ಶೋನಲ್ಲೇ ಉತ್ತರಿಸಿದ ಕಿಮೆಲ್ ನನ್ನ ಶೋ ಲೈವ್ ನೋಡುತ್ತಿರುವ ಅಧ್ಯಕ್ಷರಿಗೆ ಧನ್ಯವಾದಗಳು ನಿಮ್ಮಿಂದಲೇ ನನ್ನ ಶೊ ರೇಟಿಂಗ್ ಹೆಚ್ಚುತ್ತಿದೆ ಎಂದು ಕಾಲೆಳೆದಿದ್ದಾರೆ.**

## ದಾಳಿಗೆ ಸಂಚು ರೂಪಿಸಿದ್ದ ವೈಟ್-ಕಾಲರ್ ಉಗ್ರರು

**ನವದೆಹಲಿ:** ವೈಟ್-ಕಾಲರ್ ಭಯೋತ್ಪಾದಕರು ದೇಶದ ಹಲವಾರು ನಗರಗಳಲ್ಲಿ ಸ್ಫೋಟಗಳನ್ನು ನಡೆಸಲು ದುಷ್ಕೃತ್ಯ ಎಸಗುವ ಯೋಜನೆ ರೂಪಿಸಿದ್ದರು ಎನ್ನುವುದು ಇದೀಗ ಬಹಿರಂಗಗೊಂಡಿದೆ. ಬಂಧಿತ ವೈದ್ಯ ಭಯೋತ್ಪಾದಕರಲ್ಲಿ ಒಬ್ಬ ಕಳೆದ 2023ರಲ್ಲಿ ದೇಶದ ಹಲವು ನಗರಗಳಲ್ಲಿ ದಾಳಿ ನಡೆಸಲು ಸಂಚು ರೂಪಿಸಲಾಗಿತ್ತು ಎಂದು ಒಪ್ಪಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತನಿಖಾಧಿಕಾರಿಗಳು 10/11 ಸ್ಫೋಟದ ಹಿಂದಿನ ಪಿತೂರಿಯನ್ನು ಡಿಕೋಡ್ ಮಾಡುತ್ತಿದ್ದಾರೆ.ಆತ್ಮಹತ್ಯಾ ಬಾಂಬರ್ ಉಮರ್ ಮೊಹಮ್ಮದ್ ಅವರ ಸಹಚರ ಡಾ. ಮುಜಮ್ಮಿಲ್ ಶಕೀಲ್, ರಾಷ್ಟ್ರೀಯ ತನಿಖಾ ಸಂಸ್ಥೆ ನಡೆಸಿದ ವಿಚಾರಣೆಯ ಸಮಯದಲ್ಲಿ, ಸ್ಫೋಟಗಳಿಗೆ ಎರಡು ವರ್ಷಗಳಿಂದ ತಯಾರಿ ನಡೆಸುತ್ತಿರುವುದಾಗಿ ಹೇಳಿಕೊಂಡಿದ್ದಾರೆ.

ಈ ಸಮಯದಲ್ಲಿ, ಅವರು ಸ್ಫೋಟಕಗಳು, ರಿಮೋಟ್‌ಗಳು ಮತ್ತು ಇತರ ಬಾಂಬ್ ತಯಾರಿಕೆ ಸಾಮಗ್ರಿಗಳನ್ನು ಸಂಗ್ರಹಿಸುತ್ತಿದ್ದರು ಎಂದು ಮೂಲಗಳು ತಿಳಿಸಿವೆ. ವೈದ್ಯರಿಗೆ ಯೂರಿಯಾ ಮತ್ತು ಅಮೋನಿಯಂ ನೈಟ್ರೇಟ್ ಖರೀದಿಸುವ ಕೆಲಸವನ್ನು ವಹಿಸಲಾಗಿತ್ತು, ಇದು ಇತರ ಬಾಷ್ಪಶೀಲ ವಸ್ತುಗಳೊಂದಿಗೆ ಬೆರೆಸಿದಾಗ ಸ್ಫೋಟಗೊಳ್ಳುವ ಮತ್ತು ಬಾಹ್ಯವಾಗಿ ಸ್ಫೋಟಗೊಳ್ಳುವ ಸಂಯುಕ್ತವಾಗಿದೆ.



ಮುಜಮ್ಮಿಲ್ ಹರಿಯಾಣದ ಗುರುಗ್ರಾಮ್ ಮತ್ತು ನುಹ್‌ನಿಂದ 3 ಲಕ್ಷ ರೂ.ಗೆ 26 ಕ್ವಿಂಟಾಲ್ ರಸಗೊಬ್ಬರವನ್ನು ಖರೀದಿಸಿದ್ದರು.ಸ್ಫೋಟಕಗಳಲ್ಲಿ ಬಳಸಲು ರಸಗೊಬ್ಬರವನ್ನು ಸಂಸ್ಕರಿಸುವುದು ಮತ್ತು ರಾಸಾಯನಿಕಗಳು ಮತ್ತು ಇತರ ಪದಾರ್ಥಗಳನ್ನು ಜೋಡಿಸುವುದು ಅವರ ಸಹಚರ ಉಮರ್ ಅವರ ಜವಾಬ್ದಾರಿಯಾಗಿದೆ ಎಂದು ಮೂಲಗಳು ತಿಳಿಸಿವೆ. ರಾಸಾಯನಿಕಗಳನ್ನು ತಯಾರಿಸಲು ಯೂರಿಯಾವನ್ನು ಪುಡಿ ಮಾಡಲು ಮುಜಮ್ಮಿಲ್ ಬಳಸುತ್ತಿದ್ದ ಹಿಟ್ಟಿನ ಗಿರಣಿಯನ್ನು ಸಹ ವಶಪಡಿಸಿಕೊಳ್ಳಲಾಗಿದೆ.

ದೆಹಲಿ ಸ್ಫೋಟದ ಪಿತೂರಿಗೆ ಭಯೋತ್ಪಾದಕ ಶಂಕಿತರೇ ಹಣಕಾಸು ಒದಗಿಸಿದ್ದಾರೆ ಎಂದು ಮೂಲಗಳು ಸೂಚಿಸುತ್ತವೆ. ಭಯೋತ್ಪಾದಕ ಮಾಡ್ಯೂಲ್‌ನ ಸದಸ್ಯರು ಸ್ಫೋಟಕ ವಸ್ತುಗಳನ್ನು ಖರೀದಿಸಲು 26 ಲಕ್ಷ ರೂ. ಹಣವನ್ನು ಸಂಗ್ರಹಿಸಿದರು. ನಂತರ ಮೊತ್ತವನ್ನು ಮೊಹಮ್ಮದ್‌ಗೆ ಹಸ್ತಾಂತರಿಸಲಾಯಿತು ಎಂದು ಮೂಲಗಳು ತಿಳಿಸಿವೆ.

## ರಾಜೀನಾಮೆ ನಂತರ ಮೊದಲ ಭಾಷಣ ಮಾಡಿದ ಧನಕರ್

**ಭೋಪಾಲ್:** ನಾನು ನನ್ನ ಕರ್ತವ್ಯವನ್ನು ಇತರ ವಿಷಯಗಳಿಗಿಂತ ಹೆಚ್ಚಾಗಿ ಪರಿಗಣಿಸುತ್ತೇನೆ. ಇದಕ್ಕೆ ನನ್ನ ಭೂತಕಾಲವೇ ಸಾಕ್ಷಿ ಎಂದ ಮಾಜಿ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಪ್ರತಿಕ್ರಿಯಿಸಿದ್ದಾರೆ.



ಅನಾರೋಗ್ಯದ ನೆಪದಲ್ಲಿ ಉಪ ರಾಷ್ಟ್ರಪತಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಇದುವರೆಗೂ ಎಲ್ಲೂ ಕಾಣಿಸಿಕೊಳ್ಳದ ಧನಕರ್ ಅವರು ಇದೇ ಮೊದಲ ಬಾರಿಗೆ ಮಾತನಾಡಿದ್ದಾರೆ.

ಹಿರಿಯ ಆರ್‌ಎಸ್‌ಎಸ್ ಕಾರ್ಯಕರ್ತ ಮನಮೋಹನ್ ವೈದ್ಯ ಬರೆದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ತಮ್ಮ ರಾಜೀನಾಮೆ ನಂತರ ಮೊದಲ ಸಾರ್ವಜನಿಕ ಭಾಷಣ ಮಾಡಿದರು.

ತಮ್ಮ ಭಾಷಣದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ತತ್ವಶಾಸ್ತ್ರ ಮತ್ತು ದೃಷ್ಟಿಕೋನವನ್ನು ಹೊಗಳಿದರು. ಈ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಅವರ ಬಳಿಗೆ ಬಂದು ದೆಹಲಿಗೆ ವಿಮಾನ ಹಿಡಿಯುವ ಬಗ್ಗೆ ಮಾಹಿತಿ ನೀಡಿದರು.

ನಂತರ ಧನಕರ್ ಅವರು, ಸಭಿಕರಿಗೆ ತಾವು ವಿಮಾನ ಹತ್ತಬೇಕಾಗಿದೆ ಎಂದು ತಿಳಿಸಿದರು ಮತ್ತು ನಾನು ವಿಮಾನ ಹತ್ತಲು ನನ್ನ ಕರ್ತವ್ಯವನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಸ್ನೇಹಿತರೇ, ನನ್ನ ಇತ್ತೀಚಿನ ಭೂತಕಾಲವೇ ಅದಕ್ಕೆ ಸಾಕ್ಷಿ ಎಂದು ನಿಗೂಢವಾಗಿ ಹೇಳಿದರು.

ಈ ಹೇಳಿಕೆಯು ಪ್ರೇಕ್ಷಕರಿಂದ ನಗುವನ್ನು ಹುಟ್ಟುಹಾಕಿತು.ಆರ್‌ಎಸ್‌ಎಸ್ ಅನ್ನು ತೀವ್ರ ಬಲಪಂಥೀಯ ಸಂಘಟನೆ ಎಂದು ಬಿಂಬಿಸುವ ಪ್ರಚಾರವನ್ನು ಪುಸ್ತಕವು ತಳ್ಳಿಹಾಕುತ್ತದೆ ಮತ್ತು ಅದನ್ನು ಮಹಾತ್ಮ ಗಾಂಧಿಯವರ ಹತ್ಯೆಗೆ ಲಿಂಕ್ ಮಾಡಲು ಪ್ರಯತ್ನಿಸುತ್ತದೆ ಅದು ಆಧಾರರಹಿತ ಆರೋಪವಾಗಿದೆ ಎಂದು ಧನಖರ್ ಹೇಳಿದರು.

## ಟಿಪ್ಪು, ಅಕ್ಬರ್ ಮಹಾನ್ ವ್ಯಕ್ತಿಗಳಲ್ಲ : ಆರ್‌ಎಸ್‌ಎಸ್ ನಾಯಕ ಸುನಿಲ್ ಅಂಬೇಕರ್

**ನಾಗ್ಪುರ:** ಮೈಸೂರು ದೊರೆ ಟಿಪ್ಪು ಸುಲ್ತಾನ್ ಹಾಗೂ ಮೊಘಲ್ ಚಕ್ರವರ್ತಿ ಅಕ್ಬರ್ ಅವರ ಹೆಸರಿನ ಮುಂದೆ ಮಹಾನ್ ಎಂಬ ವಿಶೇಷಣ ಬಳಸುವುದಿಲ್ಲ ಎಂದು ಆರ್‌ಎಸ್‌ಎಸ್ ನಾಯಕ ಸುನಿಲ್ ಅಂಬೇಕರ್ ಘೋಷಿಸಿದ್ದಾರೆ.


ಇತಿಹಾಸ ಪಠ್ಯಪುಸ್ತಕಗಳಲ್ಲಿ ಅನೇಕ ಸಕಾರಾತ್ಮಕ ಬದಲಾವಣೆಗಳನ್ನು ಪರಿಚಯಿಸಲಾಗಿದೆ. ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಈ ಬದಲಾವಣೆಗಳನ್ನು ತಂದಿದ್ದರೂ, ಹೊಸ ಪೀಳಿಗೆ ಅವರ ಕ್ರೂರ ಕೃತ್ಯಗಳನ್ನು ತಿಳಿದುಕೊಳ್ಳಬೇಕು ಎಂಬ ಕಾರಣಕ್ಕೆ ಈ ಪಠ್ಯಪುಸ್ತಕಗಳಿಂದ ಯಾರನ್ನೂ ತೆಗೆದುಹಾಕಲಾಗಿಲ್ಲ ಎಂದಿದ್ದಾರೆ.

ಎಸ್‌ಜಿಆರ್ ಜ್ಞಾನ ಪ್ರತಿಷ್ಠಾನವು ಇಲ್ಲಿ ಆಯೋಜಿಸಿದ್ದ ಆರೆಂಜ್ ಸಿಟಿ ಸಾಹಿತ್ಯ ಉತ್ಸವದಲ್ಲಿ ಅಂಬೇಕರ್ ಮಾತನಾಡಿದರು. ಭಾರತವು ಪ್ರಾಚೀನ ಜ್ಞಾನದ ವಿಶಾಲ ಮತ್ತು ಶ್ರೀಮಂತ ಸಂಪನ್ಮೂಲಗಳನ್ನು ಹೊಂದಿದೆ, ಇದನ್ನು ನಾವು ಕಲಿತು ಅರ್ಥಮಾಡಿಕೊಂಡರೆ ನಮ್ಮ ಜೀವನದಲ್ಲಿ ನಮಗೆ ಬಹಳಷ್ಟು ಸಹಾಯ ಮಾಡಬಹುದು. ಈ ಶ್ರೀಮಂತ ಜ್ಞಾನವನ್ನು ಜಗತ್ತಿಗೂ ನೀಡಬಹುದು, ಆದರೆ ಅದಕ್ಕಾಗಿ ನಾವು ಆ ಜ್ಞಾನದ ಮೇಲೆ ಗಮನಹರಿಸಬೇಕಾಗಿದೆ ಎಂದು ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಹೇಳಿದರು.

ಇತಿಹಾಸ ಪುಸ್ತಕಗಳಲ್ಲಿ ಅನೇಕ ಉತ್ತಮ ಬದಲಾವಣೆಗಳನ್ನು ತರಲಾಗಿದೆ ಎಂದು ನಾನು ನೋಡಿದೆ, ಮತ್ತು ಭವಿಷ್ಯದಲ್ಲಿ ಇನ್ನೂ ಹೆಚ್ಚಿನದನ್ನು ಮಾಡಬಹುದು.

ಆದರೆ ಈಗ, ಅವುಗಳಲ್ಲಿ (ಇತಿಹಾಸ ಪಠ್ಯಪುಸ್ತಕಗಳಲ್ಲಿ) ಅಕ್ಬರ್ ದಿ ಗ್ರೇಟ್ ಇಲ್ಲ ಅಥವಾ ಟಿಪ್ಪು ಸುಲ್ತಾನ್ ದಿ ಗ್ರೇಟ್ ಎನ್ನುವುದ ಇಲ್ಲ. ಇದೇ ರೀತಿ ಅನೇಕ ಬದಲಾವಣೆಗಳನ್ನು ತರಲಾಗಿದೆ, ಆದರೂ ಈ ಪುಸ್ತಕಗಳಿಂದ ಯಾರನ್ನೂ ತೆಗೆದುಹಾಕಲಾಗಿಲ್ಲ ಏಕೆಂದರೆ ಹೊಸ ಪೀಳಿಗೆ ಅವರ ಕ್ರೂರ ಕೃತ್ಯಗಳನ್ನು ತಿಳಿದುಕೊಳ್ಳಬೇಕು ಮತ್ತು ನಾವು ಯಾರಿಂದ ಬಲಿಪಶುಗಳಾಗಿದ್ದೇವೆ ಮತ್ತು ಯಾರಿಂದ ನಾವು ಮುಕ್ತರಾಗಬೇಕು ಎಂಬುದನ್ನು ತಿಳಿದುಕೊಳ್ಳಬೇಕು ಎಂದರು.

> **ಈಗ, ಇತಿಹಾಸ ಪಠ್ಯಪುಸ್ತಕಗಳು ಬದಲಾಗುತ್ತಿವೆ ಮತ್ತು ಉತ್ತಮ ಉಪಕ್ರಮವನ್ನು ತೆಗೆದುಕೊಂಡು 15 ತರಗತಿಗಳ ಪಠ್ಯಪುಸ್ತಕಗಳಲ್ಲಿ 11 ತರಗತಿಗಳ ಪುಸ್ತಕಗಳಲ್ಲಿ ಬದಲಾವಣೆಗಳನ್ನು ಮಾಡಿದೆ ಎಂದು ನನಗೆ ತುಂಬಾ ಸಂತೋಷವಾಗಿದೆ. 9, 10 ಮತ್ತು 12 ನೇ ತರಗತಿಗಳ ಪುಸ್ತಕಗಳಲ್ಲಿ ಬದಲಾವಣೆಗಳನ್ನು ಮುಂದಿನ ವರ್ಷ ಪರಿಚಯಿಸಲಾಗುವುದು.**
> **-ಸುನಿಲ್ ಅಂಬೇಕರ್**



### ಮಧ್ಯಂತರ ಚುನಾವಣೆಯಲ್ಲಿ ರಿಪಬ್ಲಿಕನ್ನರು ಸೋಲನ್ನು ಅನುಭವಿಸಬಹುದು: ಗ್ರೀನ್

# ಟ್ರಂಪ್ ಜೊತೆ ವಿವಾದ ಬೆನ್ನಲ್ಲೇ ರಾಜೀನಾಮೆ ಘೋಷಿಸಿದ ಟೇಲರ್

**ವಾಷಿಂಗ್ಟನ್:** ಜೆಫ್ರಿ ಎಪ್ಸ್ಟೀನ್ ಪ್ರಕರಣ ಹಾಗೂ H-1B ವೀಸಾ ವ್ಯವಸ್ಥೆಯ ರದ್ದು ಕುರಿತು ಹೇಳಿಕೆಗಳನ್ನು ನೀಡಿದ ನಂತರ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಜೊತೆಗಿನ ಇತ್ತೀಚಿನ ಭಿನ್ನತೆಯಿಂದಾಗಿ ಸುದ್ದಿಯಲ್ಲಿದ್ದ ಜಾರ್ಜಿಯಾದ ಜನಪ್ರತಿನಿಧಿ ಹಾಗೂ MAGA ಬೆಂಬಲಿಗರಾಗಿದ್ದ ಮಾರ್ಜೋರಿ ಟೇಲರ್ ಗ್ರೀನ್ ಯುಎಸ್ ಕಾಂಗ್ರೆಸ್‌ನಿಂದ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ.

ಈ ನಿರ್ಧಾರಕ್ಕೆ ಕಾರಣವಾಗಿದ್ದು, ಗ್ರೀನ್ ಹಾಗೂ ಟ್ರಂಪ್ ಅವರ ನಡುವೆ ಎಪ್ಸ್ಟೀನ್ ಫೈಲ್ಸ್ ವಿಷಯವಾಗಿ ನಡೆದಿದ್ದ ವಾಗ್ವಾದ. ಈ ವೇಳೆ ಟ್ರಂಪ್ ಗ್ರೀನ್ ಅವರನ್ನು ಅಪ್ರಬುದ್ದ ಎಂದು ಕರೆಯುವುದಲ್ಲದೆ, ಅವರನ್ನು ತಮ್ಮ ಸ್ಥಾನದಿಂದ ಕಿತ್ತುಹಾಕಲು ಸಿದ್ದವಿದ್ದೇನೆ ಜಾರ್ಜಿಯಾದಲ್ಲಿ ರಿಪಬ್ಲಿಕನ್ ಪಕ್ಷದ ಯಾರಾದರೂ ಸ್ಪರ್ಧಿಸಿಲು ಮುಂದೆ ಬಂದರೆ ನಾನು ಅವರಿಗೆ ಬೆಂಬಲಿಸುತ್ತೇನೆ ಎಂದು ಹೇಳಿಕೊಂಡಿದ್ದಾರೆ.

**ಮಧ್ಯಂತರ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷ ಸೋಲುವ ಸಾಧ್ಯತೆ ಇದೆ ಎಂದ ಗ್ರೀನ್ ರಾಜೀನಾಮೆ:** ಈ ಬೆನ್ನಲ್ಲೇ, ಗ್ರೀನ್ ಅವರು ತಮ್ಮ ಸ್ಥಾನಕ್ಕೆ ಜನವರಿ 5 2026ರಂದು ರಾಜೀನಾಮೆ ನೀಡುವುದಾಗಿ ವಿಡಿಯೋ ಮಾಡಿ ಪ್ರಕಟಿಸಿದ್ದಾರೆ.

ಇದರಲ್ಲಿ ಅಮೆರಿಕಾದ ಸಾಮನ್ಯ ಜನರ ಪರವಾಗಿ ಹೋರಾಡುತ್ತಿರುವುದರಿಂದ ನಾನು ಯಾವಾಗಲೂ ವಾಷಿಂಗ್ಟನ್ ಡಿಸಿಯಲ್ಲಿ ತಿರಸ್ಕರಿಸಲ್ಪಡುತ್ತಿದ್ದೇನೆ. ನನಗೆ ಆತ್ಮಗೌರವ ಮತ್ತು ಘನತೆ ಇದೆ. ನನ್ನ ಕುಟುಂಬವನ್ನು ನಾನು ತುಂಬಾ ಪ್ರೀತಿಸುತ್ತೇನೆ. ನಮ್ಮ ಜಿಲ್ಲೆಯು ಅಧ್ಯಕ್ಷರ ವಿರುದ್ಧ ಹೋರಾಡಿದ ನನಗೂ, ಅಧ್ಯಕ್ಷರಿಗೂ ನಡುವೆ ನೋವಿನ ಮತ್ತು ದ್ವೇಷದವಿರುವಾಗ ಪ್ರಾಥಮಿಕ ಚುನಾವಣೆಯನ್ನು ಎದುರಿಸಬೇಕೆಂದು ನಾನು ಬಯಸುವುದಿಲ್ಲ. ರಿಪಬ್ಲಿಕನ್ನರು ಮಧ್ಯಂತರ ಚುನಾವಣೆಗಳಲ್ಲಿ ಸೋಲುವ ಸಾಧ್ಯತೆ ಇರುವಾಗ, ನಾನು ಗೆಲ್ಲಲು ಹೋರಾಡಬೇಕಾಗುತ್ತದೆ ಎಂದು ಹೇಳಿದ್ದಾರೆ.

**ಟ್ರಂಪ್ ವಿರುದ್ದ ಅಸಮಾಧಾನ ಹೊರಹಾಕಿದ ಗ್ರೀನ್:** ಇದೇ ವೇಳೆ, ಅಮೆರಿಕಾದಲ್ಲಿ ರಾಜಕೀಯ ವಿಷಯಗಳನ್ನು ಕುರಿತು ಮಾತನಾಡಿ ಅನ್ಯಾಯವಾಗಿ ನಡೆದ ಸರ್ಕಾರದ ನಿರ್ಬಂಧ ವಿರುದ್ದ ಧ್ವನಿ ಎತ್ತಿದ್ದೇನೆ, H-1B ವೀಸಾದ ಕುರಿತು ನನ್ನ ನಿಲುವುಗಳು ಅಸಮಾಧಾನ ತರಿಸಿದೆ ಎಂದಿದ್ದಾರೆ. ಅದರಲ್ಲೂ ಪ್ರಮುಖವಾಗಿ ಜೆಫ್ರಿ ಎಪ್ಸ್ಟೀನ್ ಪ್ರಕರಣದ ಕುರಿತು ಮಾತನಾಡಿ 14 ನೇ ವಯಸ್ಸಿನಲ್ಲಿ ಅತ್ಯಾಚಾರಕ್ಕೊಳಗಾದ, ಶ್ರೀಮಂತ ಮತ್ತು ಶಕ್ತಿಶಾಲಿ ಪುರುಷರಿಂದ ಬಳಸಲ್ಪಟ್ಟ ಅಮೆರಿಕನ್ ಮಹಿಳೆಯರಿಗಾಗಿ ನಿಲ್ಲುವುದು, ಅಧ್ಯಕ್ಷರಿಂದ ದ್ರೋಹಿ ಎಂದು ಕರೆಸಿಕೊಳ್ಳಲು ಮತ್ತು ಬೆದರಿಕೆಗೊಳಗಾಗಲು ಕಾರಣವಾಗಬಾರದು. ನಾನು ಯಾರಿಗಾಗಿ ಹೋರಾಡಿದ್ದೆನೋ, ಅವರಿಂದಲೇ ಈ ರೀತಿ ಆಗಬಾರದು ಎಂದಿದ್ದಾರೆ. ಅಮೆರಿಕಾ ಮೊದಲು ಎಂದರೆ ಅದರಲ್ಲಿ ಅಮೆರಿಕಾ ಮಾತ್ರ ಇರಬೇಕೇ ಹೊರತು ಅಮೆರಿಕಾದೊಂದಿಗೆ ಬೇರೆ ದೇಶಗಳಿಗೆ ಪ್ರಥಮ ಸ್ಥಾನ ನೀಡಲು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ನಾನು MAGA ನಿಲುವನ್ನು ಎತ್ತಿ ಹಿಡಿದು ರಿಪಬ್ಲಿಕನ್ ಪಕ್ಷ ಹಾಗೂ ಟ್ರಂಪ್ ವಿರುದ್ದ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ಜಾರ್ಜಿಯಾ ಗವರ್ನರ್ ಸ್ಥಾನಕ್ಕೆ ಸ್ಪರ್ಧಿಸಿಲು ಸಿದ್ದವಾಗುತ್ತಿದ್ದಾರಾ ಗ್ರೀನ್?:** ಇನ್ನು, ಮಾರ್ಜೋರಿ ಟೇಲರ್ ಗ್ರೀನ್ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್ ನಿಂದ ಹೊರಬರುವುದಾಗಿ ಘೋಷಿಸಿದ್ದರೂ, ಗ್ರೀನ್ ಅವರು ರಾಜ್ಯ ಮಟ್ಟದ ಚುನಾವಣೆಗೆ ಸ್ಪರ್ಧಿಸಲು ಆಸಕ್ತಿ ತೋರಿಸಿದ್ದು, ಜಾರ್ಜಿಯಾ ಗವರ್ನರ್ ಅಥವಾ ಸೆನೆಟ್ ಸ್ಥಾನಕ್ಕೆ ಸ್ಪರ್ಧಿಸುವ ಸಾಧ್ಯತೆ ಇದೆ ಎಂದು ಅಮೆರಿಕಾದ ಮಾಧ್ಯಮ ವರದಿಗಳು ತಿಳಿಸಿವೆ.




- **ಟ್ರಂಪ್ ಜೊತೆಗಿನ ವಿವಾದದ ನಂತರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಘೋಷಿಸಿದ ಜಾರ್ಜಿಯಾ ಜನಪ್ರತಿನಿಧಿ ಮಾರ್ಜೋರಿ ಟೇಲರ್ ಗ್ರೀನ್**
- **ಅಮೆರಿಕಾದಲ್ಲಿ ನಡೆಯುವ ಮಧ್ಯಂತರ ಚುನಾವಣೆಯಲ್ಲಿ ರಿಪಬ್ಲಿಕನ್ನರು ಸೋಲನ್ನು ಅನುಭವಿಸಬಹುದು ಎಂದು ಭವಿಷ್ಯ ನುಡಿದ ಗ್ರೀನ್**
- **ಅಮೆರಿಕಾ ಅಧ್ಯಕ್ಷರ ವಿರುದ್ದ ಅಸಮಾಧಾನ ಹೊರಹಾಕಿದ ಜಾರ್ಜಿಯ ಪ್ರತಿನಿಧಿ ಗ್ರೀನ್**

## ಮಿನಿ ನ್ಯೂಸ್

### ಗಡಿಯಲ್ಲಿ ಪಾಕಿಸ್ತಾನದ ಡ್ರೋನ್ ಪ್ರತ್ಯಕ್ಷ

**ಜಮ್ಮು:** ದೇಶದ ಗಡಿ ಭಾಗದಲ್ಲಿ ಮತ್ತೆ ಪಾಕ್ ನಿರ್ಮಿತ ಡ್ರೋನ್ ಹಾರಾಟ ಕಂಡುಬಂದಿದೆ. ಜಮ್ಮು ಮತ್ತು ಕಾಶ್ಮೀರದ ಸಾಂಬಾ ಜಿಲ್ಲೆಯ ಅಂತರ ರಾಷ್ಟ್ರೀಯ ಗಡಿಯಲ್ಲಿರುವ ಒಂದು ಹಳ್ಳಿಯ ಮೇಲೆ ಪಾಕಿಸ್ತಾನದ ಡ್ರೋನ್ ಕಾಣಿಸಿಕೊಂಡಿದೆ ಎಂದು ಅಧಿ ಕಾರಿಗಳು ತಿಳಿಸಿದ್ದಾರೆ. ತಡರಾತ್ರಿ ಪಾಕಿಸ್ತಾನದ ಚಕ್ ಭುರಾ ಪೋಸ್ಟ್‌ನಿಂದ ಬರುತ್ತಿದ್ದ ಡ್ರೋನ್ ಫಗ್ವಾಲ್ ಪ್ರದೇಶದ ರೀಗಲ್ ಗ್ರಾಮದ ಮೇಲೆ ಕೆಲವು ನಿಮಿಷಗಳ ಕಾಲ ಸುಳಿದಾಡಿದ ನಂತರ ಗಡಿಯ ಇನ್ನೊಂದು ಬದಿಗೆ ಮರಳಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಾದಕ ವಸ್ತುಗಳು ಅಥವಾ ಶಸ್ತ್ರಾಸ್ತ್ರಗಳಂತಹ ಯಾವುದೇ ಪೇಲೋಡ್ ಅನ್ನು ವಾಯುದಾಳಿಯಿಂದ ಬೀಳಿಸಲಾಗಿಲ್ಲ ಎಂದು ಖಚಿತಪಡಿಸಿಕೊಳ್ಳಲು ಭದ್ರತಾ ಪಡೆಗಳು ಆ ಪ್ರದೇಶದಲ್ಲಿ ಶೋಧ ನಡೆಸಿವೆ ಎಂದು ಅವರು ಹೇಳಿದರು.

### 300 ವಿದ್ಯಾರ್ಥಿಗಳು, ಶಿಕ್ಷಕರ ಕಿಡ್ನ್ಯಾಪ್

**ನೈಜೀರಿಯಾ:** ಇಲ್ಲಿನ ಶಾಲೆಯೊಂದರಲ್ಲಿ 315 ವಿದ್ಯಾರ್ಥಿಗಳು ಹಾಗೂ ಶಿಕ್ಷಕರನ್ನು ಬಂಧಿಸಿರುವ ಘಟನೆ ನಡೆದಿದೆ. ಒಂದೇ ವಾರದಲ್ಲಿ ಇದು 2 ಕಿಡ್ನ್ಯಾಪ್ ಕೇಸ್ ಆಗಿದೆ. ನೆರೆಯ ಕೆಬ್ಬಿ ರಾಜ್ಯದ ಮಾಧ್ಯಮಿಕ ಶಾಲೆಗೆ ಸೋಮವಾರ ಬಂದೂಕುಧಾರಿಗಳು ನುಗ್ಗಿ 25 ಬಾಲಕಿಯರನ್ನು ಅಪಹರಿಸಿದ್ದರು. ಅದರ ಬೆನ್ನಲ್ಲೇ ಮಧ್ಯ ನೈಜೀರಿಯಾದ ನೈಜರ್ ರಾಜ್ಯದಲ್ಲಿರುವ ಸೇಂಟ್ ಮೇರಿಸ್ ಸಹ-ಶಿಕ್ಷಣ ಶಾಲೆಯ ಮೇಲೆ ಶುಕ್ರವಾರ ಮುಂಜಾನೆ ದಾಳಿ ನಡೆಸಿ ಮಕ್ಕಳು, ಶಿಕ್ಷಕರನ್ನು ಕಿಡ್ನ್ಯಾಪ್ ಮಾಡಿದ್ದಾರೆ. 303 ವಿದ್ಯಾರ್ಥಿಗಳು ಹಾಗೂ 12 ಮಂದಿ ಶಿಕ್ಷಕರನ್ನು ಕಿಡ್ನ್ಯಾಪ್ ಮಾಡಲಾಗಿದೆ ಎಂದು ನೈಜೀರಿಯಾದ ಕ್ರಿಶ್ಚಿಯನ್ ಅಸೋಸಿಯೇಷನ್ ತಿಳಿಸಿದೆ. ಸೇಂಟ್ ಮೇರಿಸ್ ಶಾಲೆಯಲ್ಲಿ ಸುಮಾರು 629 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅವರಲ್ಲಿ ಅರ್ಧದಷ್ಟು ಮಂದಿ ಅಪಹರಣಕ್ಕೊಳಗಾಗಿದ್ದಾರೆ.ಅಪಹರಿಸಲ್ಪಟ್ಟ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಸಂಖ್ಯೆಯ ಬಗ್ಗೆ ನೈಜೀರಿಯಾ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಹತ್ತಿರದ ರಾಜ್ಯಗಳಾದ ಕಟ್ಸಿನಾ ಮತ್ತು ಪ್ಲಾಟೋದಲ್ಲಿನ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲಾ ಶಾಲೆಗಳನ್ನು ಮುಚ್ಚಲು ಆದೇಶಿಸಿದ್ದಾರೆ.

ಒಂದು ದಶಕದ ಹಿಂದೆ ಈಶಾನ್ಯ ಬೊರ್ನೊ ರಾಜ್ಯದ ಚಿಬೋಕ್ ನಲ್ಲಿ ಬೊಕೊ ಹರಾಮ್ ಜಿಹಾದಿಗಳು ಸುಮಾರು 300 ಹುಡುಗಿಯರನ್ನು ಅಪಹರಿಸಿದ್ದರು. ಆ ಘಟನೆಯಿಂದ ನೈಜೀರಿಯಾ ಇನ್ನೂ ಕಂಗಾಲಾಗಿದೆ. ಆ ಹುಡುಗಿಯರಲ್ಲಿ ಕೆಲವರು ಇನ್ನೂ ಪತ್ತೆಯಾಗಿಲ್ಲ.

### ತಿರುಪತಿಯಲ್ಲಿ 5 ವರ್ಷದಲ್ಲಿ 20 ಕೋಟಿ ಕಲಬೆರಕೆ ಲಡ್ಡು ವಿತರಣೆ

**ಅಮರಾವತಿ:** ಆಂಧ್ರದ ತಿರುಪತಿ ದೇವಾಲಯದಲ್ಲಿ ಕಲಬೆರಕೆ ತುಪ್ಪ ಬಳಸಿ ಅಂದಾಜು 20 ಕೋಟಿ ಲಡ್ಡುಗಳನ್ನು ತಯಾರಿಸಿ ವಿತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 2019-2024ರ ಅವಧಿಯಲ್ಲಿ ವಿತರಿಸಲಾದ ಒಟ್ಟು 48.76 ಕೋಟಿ ಲಡ್ಡುಗಳಲ್ಲಿ ಇದೂ ಒಂದು ಎಂದು ತಿರುಮಲ ತಿರುಪತಿ ದೇವಸ್ಥಾನಂ ಟ್ರಸ್ಟ್ ಮಂಡಳಿಯ ಅಧ್ಯಕ್ಷ ಬಿ.ಆರ್. ನಾಯ್ಡು ತಿಳಿಸಿದ್ದಾರೆ. ದೇವಾಲಯದಲ್ಲಿ ದೈನಂದಿನ ಜನದಟ್ಟಣೆ, ಖರೀದಿ ವಿವರಗಳು ಮತ್ತು ಉತ್ಪಾದನೆ ಮತ್ತು ಮಾರಾಟದ ಅಂಕಿ ಅಂಶಗಳ ಆಧಾರದಲ್ಲಿ ಎಷ್ಟು ಕೋಟಿ ಲಡ್ಡು ವಿತರಣೆ ಆಗಿದೆ ಎಂದು ಹೇಳಲಾಗಿದೆ.

ಕಳೆದ ವರ್ಷ ಈ ಕಲಬೆರಕೆ ತುಪ್ಪ ತಯಾರಿಸಿ ಲಡ್ಡು ತಯಾರಿಸುತ್ತಿದ್ದ ವಿಚಾರ ಬೆಳಕಿಗೆ ಬಂದಿತ್ತು. ಈ ಪ್ರಕರಣವನ್ನು ಈಗ ಕೇಂದ್ರ ತನಿಖಾ ದಳದ ನೇತೃತ್ವದ ಎಸ್‌ಐಟಿ ತನಿಖೆ ನಡೆಸುತ್ತಿದೆ. ಸುಮಾರು 250 ಕೋಟಿ ರೂ. ಮೌಲ್ಯದ 68 ಲಕ್ಷ ಕೆಜಿ ಕಲಬೆರಕೆ ತುಪ್ಪವನ್ನು ಪಾಮ್ ಎಣ್ಣೆ, ಪಾಮ್ ಕರ್ನಲ್ ಎಣ್ಣೆ ಮತ್ತು ಇತರ ವಿಷಕಾರಿ ಪದಾರ್ಥಗಳೊಂದಿಗೆ ಬೆರೆಸಿ ಉತ್ತರಾಖಂಡದ ಭೋಲೆ ಬಾಬಾ ಡೈರಿ ಮತ್ತು ಅದರ ಶೆಲ್ ಕಂಪನಿಗಳು ಪೂರೈಸಿವೆ ಎಂದನ್ನು ಪತ್ತೆ ಮಾಡಲಾಗಿದೆ.

### ಹಾಸ್ಟೆಲ್‌ನ 4ನೇ ಮಹಡಿಯಿಂದ ಜಿಗಿದು ನರ್ಸಿಂಗ್ ವಿದ್ಯಾರ್ಥಿನಿ ಆತ್ಮಹತ್ಯೆ

**ಹೈದರಾಬಾದ್:** ಆಂಧ್ರಪ್ರದೇಶದ ಕುಪ್ಪಂನಲ್ಲಿ ನರ್ಸಿಂಗ್ ವಿದ್ಯಾರ್ಥಿನಿಯೊಬ್ಬಳು ಹಾಸ್ಟೆಲ್ ಕಟ್ಟಡದ 4ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆಗೆ ಶರಣಾಗಿದ್ದಾಳೆ. ಆತ್ಮಹತ್ಯೆಗೆ ಶರಣಾದ ಯುವತಿಯನ್ನು ಪಲ್ಲವಿ ಎಂದು ಗುರುತಿಸಲಾಗಿದೆ. ಆಕೆ ಕುಪ್ಪಂನ ಖಾಸಗಿ ಕಾಲೇಜೊಂದರಲ್ಲಿ 2ನೇ ವರ್ಷದ ಬಿಎಸ್ಸಿ ನರ್ಸಿಂಗ್ ಓದುತ್ತಿದ್ದಳು. ಯುವತಿ ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದಳು. ನ.20 ರಂದು ಆಕೆ ಹಾಸ್ಟೆಲ್ ಕಟ್ಟಡದಿಂದ ಜಿಗಿದಿದ್ದಳು. ಗಾಯಗೊಂಡಿದ್ದ ಪಲ್ಲವಿಯನ್ನು ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಸೇರಿ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಿಸದೇ ನ.21 ರಂದು ಆಕೆ ಸಾವನ್ನಪ್ಪಿದ್ದಾಳೆ ಎಂದು ಮೂಲಗಳು ತಿಳಿಸಿವೆ.

### ಅಮೆರಿಕಾ ಶಾಂತಿ ಒಪ್ಪಂದ ಗೊಂದಲದಲ್ಲಿ ಉಕ್ರೇನ್: ವಲೋಡಿಮಿರ್ ಝೆಲೆಸ್ಕಿ

**ಕೈವ್:** ಅಮೆರಿಕಾದ ಶಾಂತಿ ಒಪ್ಪಂದ ಯೋಜನೆಯಿಂದ ಉಕ್ರೇನ್ ಕಷ್ಟಕರವಾದ ಆಯ್ಕೆ ಎದುರಿಸುವ ಸಂದಿಗ್ಧ ಪರಿಸ್ಥಿತಿಯಲ್ಲಿದೆ ಎಂದು ಉಕ್ರೇನ್ ಅಧ್ಯಕ್ಷ ವಲೋಡಿಮಿರ್ ಝೆಲೆಸ್ಕಿ ಹೇಳಿದ್ದಾರೆ.

ರಷ್ಯಾದೊಂದಿಗಿನ ಯುದ್ಧವನ್ನು ಹೇಗೆ ಕೊನೆಗೊಳಿಸುವುದು ಎನ್ನುವ ಕುರಿತು ಶ್ವೇತಭವನ ಸಿದ್ಧಪಡಿಸಿರುವ ಶಾಂತಿ ಒಪ್ಪಂದ ಯೋಜನೆಯಿಂದ ಉಕ್ರೇನ್ ಅಮೆರಿಕದ ಬೆಂಬಲ ಕಳೆದುಕೊಳ್ಳುವ ಅಪಾಯದಲ್ಲಿದೆ ಎಂದು ತಿಳಿಸಿದ್ದಾರೆ.

ದೇಶವನ್ನುದ್ದೇಶಿಸಿ ಮಾತನಾಡಿದ ಅವರು ಶಾಂತಿ ಒಪ್ಪಂದದ ವಿಷಯದಲ್ಲಿ ಉಕ್ರೇನ್ ''ತುಂಬಾ ಕಷ್ಟಕರವಾದ ಆಯ್ಕೆ ಎದುರಿಸಬಹುದು, ಘನತೆ ಕಳೆದುಕೊಳ್ಳುವುದು ಅಥವಾ ಪ್ರಮುಖ ಪಾಲುದಾರನನ್ನು ಕಳೆದುಕೊಳ್ಳುವ ಅಪಾಯವಿದೆ ಎಂದು ಹೇಳಿದ್ದಾರೆ. ಉಕ್ರೇನ್ ಇತಿಹಾಸದಲ್ಲಿ ಅತ್ಯಂತ ಕಷ್ಟಕರವಾದ ಕ್ಷಣಗಳಲ್ಲಿ ಒಂದಾಗಿದೆ ರಷ್ಯಾದೊಂದಿಗೆ ನಡೆಯುತ್ತಿರುವ ಯುದ್ಧ ಕೊನೆಗೊಳಿಸುವ ನಿಟ್ಟಿನಲ್ಲಿ ಉಕ್ರೇನ್ ಉತ್ಸುಕವಾಗಿದೆ ಆದರೆ ಶಾಂತಿ ಒಪ್ಪಂದದ ಭಾಗವಾಗಿ ಅಮೆರಿಕಾ ಸಿದ್ದಪಡಿಸಿರುವ ಒಪ್ಪಂದ ಉಕ್ರೇನ್‌ಗೆ ಕಷ್ಟಕರವಾಗಿದೆ, ಅದರಲ್ಲಿ ಕೆಲ ಭಾಗಗಳನ್ನು ಬಿಟ್ಟುಕೊಡುವುದು ಸೇರಿದೆ, ಹೀಗಾಗಿ ಉಕ್ರೇನ್ ಆಯ್ಕೆ ಕಷ್ಟಕರವಾಗಿದೆ ಎಂದಿದ್ದಾರೆ.

ಅಮೆರಿಕಾದ ಶಾಂತಿ ಯೋಜನೆಯ ಮಾಹಿತಿ ಸೋರಿಕೆಯಾಗಿದೆ ಎನ್ನುವ ಆರೋಪಗಳನ್ನು ತಳ್ಳಿಹಾಕಿರುವ ಅವರು ಉಕ್ರೇನ್ ನಿಯಂತ್ರಣದಲ್ಲಿರುವ ಪ್ರದೇಶಗಳನ್ನು ಯಾವುದೇ ಕಾರಣಕ್ಕೂ ರಷ್ಯಗೆ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. ಶಾಂತಿ ಒಪ್ಪಂದ ಪಾಲಿಸಬೇಕಾದರೆ ಅಮೇರಿಕಾ ಮುಂದಿಟ್ಟಿರುವ ಷರತ್ತು ಒಪ್ಪಿಕೊಳ್ಳಬೇಕು. ಷರತ್ತು ಒಪ್ಪಿಕೊಂಡರೆ ಉಕ್ರೇನ್‌ಗೆ ಕಷ್ಟಕರವಾಗಲಿದೆ, ಹೀಗಾಗಿ ಉಕ್ರೇನ್ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎನ್ನುವ ದ್ವಂದ ಮತ್ತು ಗೊಂದಲದಲ್ಲಿದೆ ಎಂದು ತಿಳಿಸಿದ್ದಾರೆ.

